## ಒಂದನೇ ಪುಟದಿಂದ

# ಮೋದಿ ಮಾರಿ ಬಿಡುತ್ತಾರೆ: ಖರ್ಗೆ

ತಿಳಿಸಿದರು.ಅಮೆರಿಕಾ ಸುಂಕದ ವಿಚಾರ ಕುರಿತು ಮಾತನಾಡಿ, ಅಮೆರಿಕಾ ಭಾರತಕ್ಕೆ ಶೇ.26ರಷ್ಟು ಸುಂಕವನ್ನು ವಿಧಿಸಿದೆ. ಆದರೆ, ಸಂಸತ್ತಿನಲ್ಲಿ ಅದರ ಬಗ್ಗೆ ಚರ್ಚೆ ನಡೆಸಲು ಅವಕಾಶ ನೀಡಲಿಲ್ಲ. ಸುಂಕ ಹೆಚ್ಚಿದ ದಿನದ ಮಧ್ಯಾಹ್ನವೇ ನಾವು ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದೆವು. ಆದರೆ, ಚರ್ಚೆ ಅವಕಾಶ ನೀಡಲಿಲ್ಲ. ದೇಶದ ಆರ್ಥಿಕತೆಯಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸಲಾಗುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಕ್ಷುಲ್ಲಕ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಿದೆ. ನೈಜ ಸಮಸ್ಯೆಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಎಂದು ಆರೋಪಿಸಿದರು.

ಸಂಸತ್ತಿನಲ್ಲಿ ಸಾರ್ವಜನಿಕ ವಿಷಯಗಳ ಬಗ್ಗೆ ಚರ್ಚಿಸುವ ಬದಲು ಬೆಳಗಿನ ಜಾವ 3–4 ಗಂಟೆಯವರೆಗೆ ಕೋಮು ವಿಚಾರಗಳ ಕುರಿತು ಚರ್ಚೆ ನಡೆಸಿತು. ಮಣಿಪುರದಂತಹ ವಿಚಾರ ಕುರಿತು ಬೆಳಗಿನ ಜಾವ 4:40 ಕ್ಕೆ ಚರ್ಚೆ ಪ್ರಾರಂಭವಾಯಿತು. ಅಮೆರಿಕಾ ಸುಂಕ ವಿಷಯದ ಬಗ್ಗೆ ಮಾತನಾಡಬೇಕಾಗಿರುವುದರಿಂದ ಮರುದಿನ ಮಣಿಪುರದ ಬಗ್ಗೆ ಚರ್ಚಿಸೋಣ ಎಂದು ಅಮಿತ್ ಶಾ ಅವರಿಗೆ ಹೇಳಿದೆ, ಆದರೆ, ಅದಕ್ಕೆ ಅವರು ಒಪ್ಪಲಿಲ್ಲ. ಜನರಿಂದ ಏನನ್ನು ಮುಚ್ಚಿಡಲು ಸರ್ಕಾರ ಯತ್ನಿಸುತ್ತಿದೆ? ತನ್ನ ವೈಫಲ್ಯಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಿರುವುದನ್ನು ಇದು ಬಹಿರಂಗಪಡಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು

# ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆ

ಕರಾವಳಿಯ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಇನ್ನು ಉತ್ತರ ಒಳನಾಡಿನಲ್ಲಿ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಭರ್ಜರಿ ಮಳೆಯಾಗಲಿದೆ. ಇದರೊಂದಿಗೆ ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಸಾಮಾನ್ಯ ಮಳೆಯಾಗಲಿದೆ ಎಂದು ಐಎಂಡಿ ವರದಿ ಹೇಳಿದೆ. ಏ.08 ರಂದು ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ 4 ಸೆಂಟೀಮೀಟರ್ ಮಳೆಯಾಗಿದೆ. ಇನ್ನು ಬೆಂಗಳೂರಿನಲ್ಲಿ 24 ಗಂಟೆಗಳು ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಗರಿಷ್ಠ 35 ಡಿಗ್ರಿ ಮತ್ತು ಕನಿಷ್ಠ 22 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

### ಹೊನ್ನಯ್ಯ ತಾತಾ ಜಾತ್ರಾ ಮಹೋತ್ಸವದಂಗವಾಗಿ

# ಧಾರ್ಮಿಕ,ಸಾಂಸ್ಕೃತಿಕ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು, ಏ.09:ದೇವದುರ್ಗತಾಲ್ಲೂಕಿನಗಬ್ಬೂರು ಹೋಬಳಿಯ ಹೇಮನಾಳ ಗ್ರಾಮದಲ್ಲಿ ಶ್ರೀ ಮಹಾತ್ಮ ಹೊನ್ನಯ್ಯತಾತಾಜಾತ್ರಾ ಮಹೋತ್ಸವ ಅಂಗವಾಗಿ ಏಪ್ರಿಲ್ 09 ರಿಂದ 13 ರವರೆಗೆಧಾರ್ಮಿಕಸಾಂಸ್ಕೃತಿಕ ಸಾಮಾಜಿಕಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ.

ಜಾತ್ರಾಮಹೋತ್ಸವಅಂಗವಾಗಿ ನೂತನ ಶೀಲಾ ಮಂದಿರ ಲೋಕಾರ್ಪಣೆ,ಈಶ್ವರ ಲಿಂಗ ಪ್ರತಿಷ್ಠಾನ,ನೂತನಗೋಪುರದ ಕಳಸಾರೋಹಣ ನಂದಿ ,ವಿಘ್ನೇಶ್ವರ,ಶಂಭಾವಿ,ಶಣ್ಮುಖ ಹಾಗೂ ಪವಾಡ ಪುರುಷ ಮಲ್ಲಿಕಾರ್ಜುನತಾತಾನವರ ಶೀಲಾ ಮೂರ್ತಿ ಪ್ರತಿಷ್ಠಾನ ಧ್ವಜಾಸ್ತಂಭಪ್ರತಿಷ್ಠಾನ,ಧರ್ಮಸಭೆ ಹಾಗೂ ಉಚಿತ ಸಾಮೂಹಿಕ ವಿವಾಹ ಜರುಗಲಿವೆ.ಏಪ್ರಿಲ್ 09 ರಂದುದೇವರಗುಂಡಗುರ್ತಿಯಿಂದ ಹೇಮನಾಳಗ್ರಾಮಕ್ಕೆಈಶ್ವರಲಿಂಗ ,ನಂದಿ,ವಿಘ್ನೇಶ್ವರ,ಶಂಭಾವಿ, ಶಣ್ಮುಖಮೂರ್ತಿಗಳಆಗಮಿಸಿದ್ದು, ಸಕಲ ಧಾರ್ಮಿಕ ವಿಧಿ ವಿಧಾನಗಳೊಂದಿಗೆಮೆರವಣಿಗೆ ಮೂಲಕ ಸ್ವಾಗತಿಸಲಾಯಿತು.

ಏಪ್ರಿಲ್ 10 ರಂದು ನಾಳೆ ಸಂಜೆ ಪಲ್ಲಕ್ಕಿ ಸೇವೆ ಹಾಗೂ ಹೊನ್ನಯ್ಯತಾತಾನವರಭಾಗಚಿತ್ರದ ಮೆರವಣಿಗೆ ನೆರವೇರಲಿದೆ. ಏಪ್ರಿಲ್ 11 ರಂದು ಬೆಳ್ಳಿಗ್ಗೆ 7:30ಕ್ಕೆ ಈಶ್ವರ ಲಿಂಗ .ನಂದಿ. ವಿಘ್ನೇಶ್ವರ,ಶಂಭಾವಿ,ಷಣ್ಮುಖ ಮಲ್ಲಿಕಾರ್ಜುನ್‌ತಾತಾಮೂರ್ತಿಗಳ ಪ್ರಾಣ ಪ್ರತಿಷ್ಠಾನ ಜರುಗಲಿದ್ದು ಸಂಜೆಉಚ್ಚಯಾಯಜರುಗಲಿದೆ.

ಏಪ್ರಿಲ್ 12 ರಂದು ಬೆಳ್ಳಿಗ್ಗೆ 6ರಿಂದರುದ್ರಾಭಿಷೇಕನಂತರ 10ಗಂಟೆಗೆಧ್ವಜಸ್ತಂಭ ಸ್ಥಾಪನೆ ಧರ್ಮಸಭೆ ನಂತರ 12 ಗಂಟೆಗೆಉಚಿತ ಸಾಮೂಹಿಕ ವಿವಾಹಗಳು ಹಾಗೂ ಇದೇ ವೇಳೆ ಎತ್ತುಗಳ ಪ್ರದರ್ಶನ ನೆರೆವೇರಲಿದೆ.ಈ ಎಲ್ಲಾ ಕಾರ್ಯಕ್ರಮಗಳಿಗೆನಿಲೋಗಲ್ ಸಂಸ್ಥಾನ ಮಠದ ಶ್ರೀ ಡಾ. ಪಂಚಾಕ್ಷರಿ ಮಹಾಸ್ವಾಮಿಗಳು, ಗಬ್ಬೂರು ಶ್ರೀಬೂದಿಬಸವೇಶ್ವರ ಮಠದ ಶ್ರೀಬೂದಿಬಸವೇಶ್ವರ ಶಿವಾಚಾರ್ಯ, ಸ್ವಾಮಿಗಳು ಸುಲ್ತಾನಪೂರದ ಶಂಭು ಸೋಮನಾಥ ಸ್ವಾಮಿಗಳು , ಮತ್ತು ಶ್ರೀನಿವಾಸ ಸರಡಿಗಿ, ಡಾ. ಅಪ್ಪರಾವ್‌ದೇವಿ ಮುತ್ಯ ಸಾನಿಧ್ಯ ವಹಿಸಲಿದ್ದು ,ದೇವರಗುಂಡಗುರ್ತಿಯಮೈಲಾರ ಲಿಂಗೇಶ್ವರ ಸಂಸ್ಥಾನದ ಶ್ರೀ ಶಾಂತ ನಿಜಲಿಂಗ ಸ್ವಾಮಿಗಳ ನೇತೃತ್ವ ವಹಿಸುವವರು .

ಈನಾಲ್ಕುದಿನಕಾರ್ಯಕ್ರಮದಲ್ಲಿ ಅನೇಕ ರಾಜಕೀಯಧಾರ್ಮಿಕ ಮುಖಂಡರು ಸೇರಿದಂತೆ ಕೆ.ಪಿ.ಎಸ್.ಸಿಯ ಶಿವಶಂಕರಪ್ಪ ಸಾಹುಕಾರ್ ಶಾಸಕಿ ಕರಿಯಮ್ಮ ನಾಯಕ, ಮಾಜಿ ಶಾಸಕ ಶಿವನಗೌಡ ನಾಯಕ, ಮಾಜಿ ಸಂಸದ ಬಿ.ವಿ ನಾಯಕ, ವಿಧಾನ ಪರಿಷತ್ ಮಾಜಿ ಸದಸ್ಯ ಬಸವರಾಜ ಪಾಟೀಲ್ ಇಟ್ಟಿಗಿ ಮತ್ತುದೇವದುರ್ಗ ಟಿ.ಎ.ಪಿ.ಸಿ.ಎಂ.ಎಸ್ ಅಧ್ಯಕ್ಷ ಶರಣಗೌಡ ಮದರಕಲ್ ಗುರುವಿನ ಸಿದ್ದಯ್ಯತಾತಾ, ಏಕನಾಥ ಭಂಡಾರಿ, ಸೇರಿದಂತೆ ಅನೇಕ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೇಮನಾಳ ಸೇರಿದಂತೆ ಸುತ್ತಲಿನ ಗ್ರಾಮಸ್ಥರು ಭಾಗವಹಿಸಲು ಜಾತ್ರಾ ಮಹೋತ್ಸವದ ಸ್ವಾಗತ ಸಮಿತಿಕೋರಿದೆ.

# ಪರಸ್ಪರ ಪ್ರೀತಿ ವಿಶ್ವಾಸದಿಂದ ಬದುಕು ಸಾಗಿಸಿ



ಬೀದರ್:ಏ.9:ಮನುಷ್ಯರೆಲ್ಲರೂ ಒಂದೇ. ಕುಲ ಕುಲ ಎಂದು ಬಡಿದಾಡದಿರಿ. ಪರಸ್ಪರ ಪ್ರೀತಿ ವಿಶ್ವಾಸದಿಂದ ಬದುಕು ಸಾಗಿಸಿಬೇಕು ಎಂದು ಜಹೀರಾಬಾದ್ ತಾಲ್ಲೂಕಿನ ಮಲ್ಲಯ್ಯಗಿರಿ ಹಾಗೂ ಬಸವಕಲ್ಯಾಣ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ಸಲಹೆ ಮಾಡಿದರು.

ಬೀದರ್‌ತಾಲ್ಲೂಕಿನನಿಡವಂಚಾ ಗ್ರಾಮದಲ್ಲಿ ಮಂಗಳವಾರ ಆಯೋಜಿಸಿದ್ದ ಶ್ರೀ ಗುರು ನಿಜಲಿಂಗ ಭದ್ರೇಶ್ವರರ111ನೇ ಪುಣ್ಯರಾಧನೆ ಅಂಗವಾಗಿ ಜಾತ್ರಾಮಹೊತ್ಸವ ಪ್ರಯುಕ್ತ ಧರ್ಮಸಭೆ ಉದ್ಘಾಟಿಸಿ ಮಾತನಾಡುತ್ತಾ ದೇವರು ಒಬ್ಬನೇಇದ್ದಾನೆ.ದೇವರಕೃಪೆಗೆ ಪಾತ್ರರಾಗಲು ಪೂಜೆ, ಧ್ಯಾನ ಮಾಡಬೇಕು.ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಅಲ್ಲದೇ ಸಾಧು ಸಂತರನ್ನು ಗೌರವಿಸಿ ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನೀವೆಲ್ಲ ಸಾಗಬೇಕು ಎಂದು ತಿಳಿಸಿದರುಬೆಳಗಾವಿ ಮುಕ್ತಿ ಮಠ ಹಾಗೂ ಇಟಗಾ ಮಠ ಪೂಜ್ಯ ಶ್ರೀ ಮಹರ್ಷಿ ಧರ್ಮಶ್ರೀ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವಹಿಸಿ ಆರ್ಶಿವಚನ ನೀಡುತ್ತಾ ಗುರು ನಿಜಲಿಂಗ ಭದ್ರೇಶ್ವರರ ಪವಾಡ ಪುರುಷರಾಗಿದರು. ಭಕ್ತರು ಭಕ್ತಿಯಿಂದ ಬೇಡಿದರೆ ಬೇಡಿದ ವರ ನೀಡಿದ್ದಾರೆ ಅಲ್ಲದೇ ಭದ್ರೇಶ್ವರರು ಜಾತಿ ಬೇಧ ಮಾಡಲಿಲ್ಲ ಮನುಷ್ಯಕುಲ ಎಂದು ಸಾರಿದರು. ಇವರು ಮಹಾ ತಪಸ್ವಿಗಳಾಗಿದರು ಎಂದರು. ಎಲ್ಲರೂ ಆಚಾರ ವಿಚಾರದಿಂದ ನಡೆದು–ಕೊಂಡು ಪ್ರೀತಿಯಿಂದ ಬದುಕು ಸಾಗಿಸಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಸಾನಿಧ್ಯವಹಿಸಿದ ಷ.ಬ್ರ.ಶ್ರೀ ಶಂಭುಲಿಂಗ ಶಿವಾಚಾರ್ಯರಹಿರೇಮುನವಳ್ಳಿ ಪ್ರತಿಯೊಬ್ಬರು ಪ್ರವಚನ, ಪುರಾಣ ಆಲಿಸಬೇಕು. ಬಿಡುವಿದ್ದಾಗ ಕುಟುಂಬದ ಸದಸ್ಯರೊಂದಿಗೆ ಸಂತಸದ ಕ್ಷಣಗಳನ್ನು ಕಳೆಯಬೇಕು ಎಲ್ಲದೇ ಎಲ್ಲರೂ ಒಳ್ಳೆಯ ವಿಚಾರ ಇಟ್ಟು ಕೊಂಡು ಬದುಕು ಸಾಗಿಸಿಬೇಕು ಹೊಸ ರಥ ನಿರ್ಮಿಸಲಾಗಿದೆ ಆ ಕಾರ್ಯಕ್ರಮದಲ್ಲಿ ಭಾಗವಹಿಸಿ ಜೀವನ ಪಾವನ ಮಾಡಿಕೊಳ್ಳಿಎಂದುತಿಳಿಸಿದರು. ಶಾಂತವೀರಯ್ಯ ಸ್ವಾಮಿ ನಾವದಗಿ ಕಾರ್ಯಕ್ರಮ ನಿರೂಪಿಸಿದರು.

# ಕಾಂಗ್ರೆಸ್ ಕಚೇರಿಯಲ್ಲಿ ಪೂರ್ವಭಾವಿ ಸಭೆ ಇಂದು

ಮಲ್ಲಮ್ಮ ನುಡಿ ವಾರ್ತೆ

ಬೀದರ್:ಏ.9:ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆಗೆ ಏಪ್ರಿಲ್ 16 ರಂದು ಬೀದರಗೆ ಬರಲಿರುವ ಪ್ರಯುಕ್ತ ನಗರದ ಕಾಂಗ್ರೆಸ್ ಜಿಲ್ಲಾ ಘಟಕದ ಕಚೇರಿಯಲ್ಲಿ ಏಪ್ರಿಲ್ 10 ರಂದು ಸಂಜೆ 4.30ಕ್ಕೆ ಪೂರ್ವಭಾವಿ ಸಿದ್ಧತಾ ಸಭೆ ಕರೆಯಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ನೇತೃತ್ವ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ.

ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್, ಸಂಸದ ಸಾಗರ್ ಖಂಡ್ರೆ, ಮಾಜಿ ಸಚಿವ ರಾಜಶೇಖರ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಪಾಟೀಲ, ಭೀಮರಾವ್ ಪಾಟೀಲ ಉಪಸ್ಥಿತರಿರಲಿದ್ದಾರೆ.

ಪಕ್ಷದ ಮುಖಂಡರು, ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಜಿಲ್ಲಾ, ತಾಲ್ಲೂಕು, ಮುಂಚೂಣಿ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಬೇಕು ಎಂದು ಪಕ್ಷದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ಕೋರಿದ್ದಾರೆ.

# ಏ.11 ರಂದು ನೇರ ಸಂದರ್ಶನಕ್ಕೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಏ.09 : ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಯಾದಗಿರಿ ಮತ್ತು ಸ್ವತಂತ್ರಮೈಕ್ರೋಫೀನ್ ಪ್ರೈ.ಲಿ ಇವರ ಸಹಯೋಗದೊಂದಿಗೆ ಇದೇ 2025ರ ಏಪ್ರಿಲ್ 11ರ ಶುಕ್ರವಾರ ರಂದು ಯಾದಗಿರಿ ಲಕ್ಷಿ ??ೀ ನಗರ, ಲಕ್ಷಿ ??ೀ ಮಂದಿರ ಹತ್ತಿರ, ಬಸವೇಶ್ವರ ಕಲ್ಯಾಣ ಮಂಟಪ ಹತ್ತಿರದಲ್ಲಿ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಅವರು ತಿಳಿಸಿದ್ದಾರೆ.

ಅಂದು ಸಂದರ್ಶನವು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ಗಂಟೆಯ ವರೆಗೆ ಇರುತ್ತದೆ, ಸ್ವತಂತ್ರಮೈಕ್ರೋಫೀನ್ ಪ್ರೈ.ಲಿ ಯಾದಗಿರಿ, ಫೀಲ್ಡ್ ಅಫೀಸರ್ 30 ಹುದ್ದೆಗಳು ಖಾಲಿ ಇದ್ದು, ಅರ್ಹತೆ 10ನೇ ಪಾಸ್ ಹೊಂದಿರಬೇಕು, ಅಥವಾ ಮೇಲ್ಪಟ್ಟು,ಯಾದಗಿರಿಶಹಾಪೂರ, ಸೇಡಂ, ಕಲಬುರಗಿ ಉದ್ಯೋಗ ಸ್ಥಳವಾಗಿದೆ. 18 ರಿಂದ 28 ವರ್ಷ ಒಳಗಿರಬೇಕು, ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಭಾಗವಹಿಸಬೇಕು, ಈ ಹುದ್ದೆಗೆ ಬೈಕ್ ಮತ್ತು ಆ.ಐ. ಕಡ್ಡಾಯ. ಅವಕಾಶ ವಂಚಿತ ನಿರುದ್ಯೋಗಿ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದೆ. ಈ ನೇರ ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ದಾಖಲಾತಿಗಳೊಂದಿಗೆ ವ್ಯಕ್ತಿ ಪರಿಚಯ ರಿಸ್ಯೂಮ್, ಬಯೋಡಾಟಾದೊಂದಿಗೆನೇರ ಸಂದರ್ಶನಕ್ಕೆಹಾಜರಾಗಬೇಕು, ಹಾಗೂ ನೇರ ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆ ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಚಿತ್ತಾಪೂರು ರೋಡ್ (ಮಿನಿ ವಿಧಾನ ಸೌಧ) ಜಿಲ್ಲಾಡಳಿತ ಭವನ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಬಿ.ಬ್ಲಾಕ್ ರೂ.ನಂ. ಬಿ1, ಬಿ2 2ನೇ ಮಹಡಿ ಯಾದಗಿರಿ ದೂ.ಸಂ.08473253718, ಮೊ.ನಂ.8655791227, 9448566765ಗೆಕಛೇರಿಯಸಮಯದಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರವೀಂದ್ರನಾಥ ಕೆ ತೋಟದ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಏ.9:ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳಮಾರ್ಗದರ್ಶನದಲ್ಲಿ ಹಾಗೂ ರಾಷ್ಟ್ರೀಯ ಅಧ್ಯಕ್ಷ ಡಾ. ಬಿ ಎಸ್ ಪಾಟೀಲ್ (ನಾಗರಾಳ ಹುಲಿ) ಅವರ ಸಲಹೆ ಮೇರೆಗೆ ಜಿಲ್ಲೆಯ ಕುಕನೂರ ತಾಲೂಕಿನ ಮಂಗಳೂರು ಗ್ರಾಮದ ರವೀಂದ್ರನಾಥ ಕೊಟ್ರಪ್ಪ ತೆ–ೂೕಟದ ಅವರನ್ನು ಪಂಚ ಸೇನಾ ಕಲ್ಯಾಣ ಕರ್ನಾಟಕ ಮಾಧ್ಯಮ ವಕ್ತಾರರಾಗಿ ಆಯ್ಕೆ ಮಾಡಲಾಗಿದೆ.

ರವೀಂದ್ರನಾಥ ತೋಟದ ಅವರು ಚತುರ ಯುವ ನಾಯಕರಾಗಿದ್ದು, ಸಂಘಟನಾ ದಕ್ಷತೆಯಲ್ಲಿ ವಿಶಿಷ್ಟ ಹೆಸರುಗಳಿಸಿದ್ದಾರೆ ಕಲ್ಯಾಣ ಕರ್ನಾಟಕ ಪಂಚಮಸಾಲಿ ಸಮಾಜದ ಜಿಲ್ಲೆ, ತಾಲೂಕು, ಗ್ರಾಮ ಮಟ್ಟದ ಘಟಕಗಳ ಯುವಕರಿಗೆ ಸಂಘಟನಾ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರೇರಣೆ ನೀಡುವಲ್ಲಿ ಮಹತ್ವದ ಪಾತ್ರವಹಿಸಲಿದ್ದಾರೆ ಎಂದು ಈ ನೇಮಕಾತಿಯನ್ನು ರಾಜ್ಯಾಧ್ಯಕ್ಷ ಶ್ರೀ ರುದ್ರಗೌಡ್ರ ವಿ. ಸೊಲಬನಗೌಡ್ರ ಅವರು ಅಧಿಕೃತವಾಗಿ ಘೋಷಿಸಿದ್ದು, ನೂತನನೇಮಕಾತಿಯಮೂಲಕ ಸಂಘಟನೆಯ ಬಲ ಹೆಚ್ಚುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಕಚುಸಾಪ ರಾಜ್ಯ ಸಮ್ಮೇಳನ ಇಂದು

ಬಸವಕಲ್ಯಾಣ :ಏ.9: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ 13ನೆಯ ಸಮ್ಮೇಳನವನ್ನು ದಿ.10 ಗುರುವಾರ ಬೆಳಿಗ್ಗೆ 10 ಗಂಟೆಗೆ ಅಫಜಲಪುರ ಹಿರೇಮಠದ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರ ಸಾನಿಧ್ಯದಲ್ಲಿ ಶಾಸಕ ಶರಣು ಸಲಗರ ಉದ್ಘಾಟಿಸಲಿದ್ದು, ಸರ್ವಾಧ್ಯಕ್ಷರಾಗಿ ಶ್ರೀನಿವಾಸ ಸರಡಗಿಯ ಡಾ.ರೇವಣಸಿದ್ದ ಶಿವಾಚಾರ್ಯರುಪಾಲ್ಗೊಳ್ಳುವರು. ನಿಕಟಪೂರ್ವ ಸರ್ವಾಧ್ಯಕ್ಷ ಆತಿಥೇಯಡಾ.ಅಭಿನವಘನಲಿಂಗ ರುದ್ರಮುನಿ ಶಿವಾಚಾರ್ಯ ಸಮ್ಮುಖವಹಿಸುವರು ಇದೇ ಸಂದರ್ಭದಲ್ಲಿ ಘನಲಿಂಗ ರುದ್ರಮುನಿ ಜಾತ್ರಾಮಹೋತ್ಸವ ಅಂಗವಾಗಿ ಐದು ಜನ ಗಣ್ಯರಿಗೆ " ಅಭಿನವ ಘನಲಿಂಗ ಶ್ರೀ " ಪ್ರಶಸ್ತಿಪ್ರದಾನ ಮಾಡಲಾಗುತ್ತದೆ ಎಂದು ಗವಿಮಠದ ಡಾ ಘನಲಿಂಗ ರುದ್ರಮುನಿ ಶಿವಾಚಾರ್ಯ ತಿಳಿಸಿದರು. ಶ್ರೀ ಮಠದಲ್ಲಿ ಮಂಗಳವಾರ ಮಧ್ಯಾಹ್ನ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ವಿವರ ನೀಡಿದರು. ಸಮ್ಮೇಳನದಲ್ಲಿ ವಿಚಾರಗೋಷ್ಠಿ, ಚುಟುಕು ವಾಚನ ಗೋಷ್ಠಿಯಲ್ಲಿ ನಾಡಿನ ಹೆಸರಾಂತಬರಹಗಾರರು,ಕವಿಗಳು ಭಾಗವಹಿಸುವರು ಜತೆಯಲ್ಲಿ ಸಂಗೀತ, ನೃತ್ಯವನ್ನು ಸ್ಥಳೀಯ ಪ್ರತಿಭೆಗಳಿಂದ ಏರ್ಪಡಿಸಲಾಗಿದೆ ಎಂದು ಹೇಳಿದರು.

# 500 ಕೋಟಿ ಕಿಕ್‌ಬ್ಯಾಕ್ ಆರೋಪ

ಗೌಡ ಆರೋಪಿಸಿದ್ದಾರೆ.ಸಿಎಂ ಸಿದ್ದರಾಮಯ್ಯ ನಿರ್ಧಾರದಿಂದ ಸರ್ಕಾರದ ಬೊಕ್ಕಸಕ್ಕೆ 5000 ಕೋಟಿ ನಷ್ಟ ಆಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಸೆಕ್ಷನ್ 7, 9, 11, 12 ಮತ್ತು 15 ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿ ಎಂದು ಮನವಿ ಮಾಡಲಾಗಿದೆ. ದೂರುದಾರರ ಜೊತೆ ರಾಜ್ಯಪಾಲರು ಸುದೀರ್ಘವಾಗಿ ಚರ್ಚೆ ನಡೆಸಿದ್ದಾರೆ. ಆ ನಂತರ ದೂರಿನ ಮೇಲೆ ಸಹಿ ಮಾಡಿ ಕಾನೂನು ವಿಭಾಗದ ಅಭಿಪ್ರಾಯಕ್ಕೆ ಕಳುಹಿಸಿದ್ದಾರೆ.

# ಶಿಷ್ಯವೇತನ: 12, 19 ರಂದು ಪರೀಕ್ಷೆ

ಮಲ್ಲಮ್ಮ ನುಡಿ ವಾರ್ತೆ

ಬೀದರ್:ಏ.9: ನಗರದ ದಿ ಇನ್ಫಿನಿಟಿ ಶಾಲೆಯು 8 ರಿಂದ 10ನೇ ತರಗತಿಯಲ್ಲಿ ಪ್ರವೇಶ ಪಡೆಯುವ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಏಪ್ರಿಲ್ 12 ಹಾಗೂ 19 ರಂದು ಶಿಷ್ಯವೇತನ ಪರೀಕ್ಷೆ ಹಮ್ಮಿಕೊಂಡಿದೆ.

ಪರೀಕ್ಷೆಯಲ್ಲಿ ಶೇ 90 ಮೇಲ್ಪಟ್ಟು ಅಂಕ ಪಡೆದವರಿಗೆ ಶುಲ್ಕದಲ್ಲಿ ಶೇ 50, ಶೇ 75 ಮೇಲ್ಪಟ್ಟು ಅಂಕಗಳಿಸಿದವರಿಗೆ ಶೇ 25 ರಷ್ಟು ರಿಯಾಯಿತಿ ಕಲ್ಪಿಸಲಾಗುವುದು ಎಂದು ಶಾಲೆಯ ಪ್ರಾಚಾರ್ಯೆ ಲಕ್ಷ್ಮಿ ಮುಗಳಿ ತಿಳಿಸಿದ್ದಾರೆ.

ಪರೀಕ್ಷೆಗೆ ಹೆಸರು ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9019484190 ಅಥವಾ 959199002ಗೆ ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

# ಸಾಧಕ ಸಿರಿ ರಾಷ್ಟ್ರ ಪ್ರಶಸ್ತಿಗೆ ಅಪ್ಪಾಜಿ ಆಯ್ಕೆ



ಸೇಡಂ:ಏ.09.ದಾವಣಗೆರೆಯ ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ ಕೊಡಮಾಡುವ ಸರಸ್ವತಿ ಸಾಧಕ ಸಿರಿ ರಾಷ್ಟ್ರ ಪ್ರಶಸ್ತಿಗೆ ಪತ್ರಕರ್ತ ಹಾಗೂ ಸಾಮಾಜಿಕ ಕಾರ್ಯಕರ್ತ ಶಿವಕುಮಾರಅಪ್ಪಾಜಿನಿಡಗುಂದಾ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಸಾಲಿಗ್ರಾಮ ಗಣೇಶ ಶೆಣೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಷ್ಠಾನದ 70ನೇ ವರ್ಷದ ಕನ್ನಡ ನಿತ್ಯೋತ್ಸವ ಅಂಗವಾಗಿ ನೀಡುವ 2025ನೇ ಸಾಲಿನ ಸರಸ್ವತಿ ಸಾಧಕ ಸಿರಿ ರಾಷ್ಟ್ರ ಪ್ರಶಸ್ತಿಗೆ ಪತ್ರಕರ್ತ ಶಿವಕುಮಾರ ಅವರ ಮಾಧ್ಯಮ ಕ್ಷೇತ್ರದಲ್ಲಿನ ಸಾಧನೆ ಮತ್ತು ಸಾಮಾಜಿಕ ಸೇವೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬರುವ ಏಪ್ರೀಲ್ 27ನೇ ರಂದು ದಾವಣಗೆರೆಯಲ್ಲಿ ಕಲಾಕುಂಚ ಸಾಂಸ್ಕೃತಿ ಸಂಸ್ಥೆಯ ಸಹಯೋಗದೊಂದಿಗೆ ನಡೆಯುವ ಬೃಹತ್ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

# ನೀಲಮನಳ್ಳಿ: ಕರಬೂಜ್ ಬೆಳೆ ಕ್ಷೇತೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಏ.9: ತಾಲ್ಲೂಕಿನ ನೀಲಮನಳ್ಳಿ ಗ್ರಾಮದ ರೈತ ವಾಮನರಾವ್ ಬಿರಾದರ ಅವರ ಹೊಲದಲ್ಲಿ ಎಫ್ ಎಂಸಿ ಮತ್ತು ನೆನಿಮ್ಸ್ ಕಂಪನಿ ವತಿಯಿಂದ ಕರಬೂಜ್ ಬೆಳೆ ಕ್ಷೇತ್ರೋತ್ಸವ, ವಿಚಾರ ಸಂಕಿರಣ ನಡೆಯಿತು. ಕೀಟ ರಹಿತ ಕರಬೂಜ್ ಬೆಳೆ ಬೆಳೆಯಲು ಮತ್ತು ಹೆಚ್ಚಿನ ಇಳುವರಿಗೆ ರೈತರು ಏನೇನು ಮಾಡಬೇಕು ಎಂಬ ಕುರಿತು ಎಫ್ ಎಂಸಿ ಕಂಪನಿಯ ಬಸವರಾಜ ಸ್ವಾಮಿ ವಿವರವಾದ ಮಾಹಿತಿ ನೀಡಿದರು. ಕ್ಷೇತ್ರೋತ್ಸವದಲ್ಲಿ ಹಾಲಹಳ್ಳಿ, ಬ್ಯಾಲಹಳ್ಳಿ, ಆಣದೂರ ವಾಡಿ ಗ್ರಾಮಗಳ ಸುಮಾರು 200 ಕರಬೂಜ್ ಬೆಳೆ ಬೆಳೆಯುವ ರೈತರು ಪಾಲ್ಗೊಂಡಿದ್ದರು. ಪ್ರಮುಖರಾದ ಸಿದ್ದರಾಜು, ಸಚಿನ್, ಸಂದೀಪ, ಕಾಶಿನಾಥ ಜಿ., ಸಂತೋಷ ಶೆಡೋಳೆ, ಜ್ಞಾನೇಶ್ವರ ಪಾಟೀಲ, ರವಿಕಾಂತ, ಶ್ರೀನಿವಾಸ, ಫಿರೋಜ್, ತುಕಾರಾಮ, ಅಂಬಾಜಿ ಹುಪಳೆ, ಭಗವಂತ ಪಾಟೀಲ ಸೇರಿದಂತೆ ಇತರರು ಇದ್ದರು.

# ನಾಡೋಜ ಪುರಸ್ಕೃತ ನ್ಯಾ.ಶಿವರಾಜ ಪಾಟೀಲ್‌ಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಏ.9:ಹಂಪಿ ವಿಶ್ವವಿದ್ಯಾಲಯದಿಂದ ಇತ್ತೀಚಿಗೆ ನಾಡೋಜಗೌರವಕ್ಕೆಭಾಜನರಾದ ಕರ್ನಾಟಕ ರಾಜ್ಯ ಗಡಿ ಮತ್ತು ನದಿಗಳ ಸಂರಕ್ಷಣಾ ಆಯೋಗದ ಅಧ್ಯಕ್ಷರು ಆಗಿರುವ ಸುಪ್ರೀಂ ಕೋರ್ಟ್ನ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಶಿವರಾಜ ಪಾಟೀಲ್ ಅವರನ್ನು ಬುಧವಾರ ಸನ್ಮಾನಿಸಿ ಅಭಿನಂದಿಸಲಾಯಿತು.

ಬೆಂಗಳೂರಿನಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ನಾಡೋಜ ಪುರಸ್ಕೃತ ನ್ಯಾ.ಶಿವರಾಜ ಪಾಟೀಲ್ ಅವರನ್ನು ಭೇಟಿಯಾಗಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿ ತಮಗೆ ನಾಡೋಜ ಲಭಿಸಿರುವುದರಿಂದ ಕಲ್ಯಾಣ ಕರ್ನಾಟಕ ಭಾಗಕ್ಕೆ ಗೌರವ ಸಿಕ್ಕಂತಾಗಿದೆ ಎಂದು ಸಂತಸ ವ್ಯಕ್ತ ಪಡಿಸಿದ್ದಾರೆ.

ಈಸಂದರ್ಭದಲ್ಲಿಪ್ರಮುಖರಾದ ಚಂದ್ರಕಾಂತ ಭಂಡಾರೆ, ಸಂಗಮೇಶ ಬಾದವಾಡಿ, ವೈಜಿನಾಥ ಪಾಟೀಲ್, ಡಿ.ವಿ.ಪಾಟೀಲ್ ಸೇರಿದಂತೆ ಹಲವರು ಇದ್ದರು.

# ಸಮಾಜವಾದಿ ಜನತಾ ಪಾರ್ಟಿಯ ಬೀದರ್ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಮಾಧವ ರಾಜೆವಾಲೆ




ಮಲ್ಲಮ್ಮ ನುಡಿ ವಾರ್ತೆ

ಔರಾದ:ಏ.9:ಸಮಾಜವಾದಿಜನತಾ ಪಾರ್ಟಿಯನ್ನು ಪ್ರಗತಿಪರರು, ಹಿಂದುಳಿದ ವರ್ಗಗಳು, ಪರಿಶಿಷ್ಟಜಾತಿ, ಪರಿಶಿಷ್ಟಪಂಗಡ ಹಾಗೂ ಅಲ್ಪ ಸಂಖ್ಯಾತರ ಸಮುದಾಯಗಳ ಸಾಮೂಹಿಕ ನಾಯಕತ್ವದಲ್ಲಿ ಸಾಮಾಜಿಕ, ಆರ್ಥಿಕ, ಹಾಗೂ ರಾಜಕೀಯ ಚಳುವಳಿಯನ್ನಾಗಿಸಂಘಟಿಸಲಾಗುತ್ತಿದೆ. ಬಹುಸಂಖ್ಯಾತ ದುಡಿಯುವ ವರ್ಗಗಳಾದ ಅಸಂಘಟಿತ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು, ಕಾರ್ಮಿಕರು, ರೈತರು, ಮಹಿಳೆಯರು ಹಾಗೂ ಇನ್ನಿತರೆ ಶ್ರಮಿಕ ವರ್ಗಗಳ ಸಮುದಾಯಗಳಿಗೆ ಸ್ವತಂತ್ರ, ಸ್ವಾಭಿಮಾನ ಹಾಗೂ ಸ್ವಾವಲಂಬನೆಯ ಬದು–ಕಿಗೆ ಹೆಚ್ಚು ಒತ್ತು ಕೊಡುವ ಮೂಲಕ ಸಮಸ್ಥ ದುಡಿಯುವ ವರ್ಗಗಳಿಗೆ ರಾಜ್ಯಾಂಗ ಬದ್ಧ ಮೂಲಭೂತ ಹಕ್ಕುಗಳು, ಭೂಮಿ, ಸಂಪತ್ತು ಮತ್ತು ರಾಜ್ಯಾಧಿಕಾರದಲ್ಲಿ ಸಮಪಾಲನ್ನು ಪಡೆದು ಕೊಳ್ಳುವಂತೆ ಜಾಗೃತಿ ಗೊಳಿಸಲಾಗುತ್ತಿದೆ.ಆದ್ದರಿಂದ ಶ್ರೀ ಮಾಧವ ಅಶೋಕ್ ರಾವ್ ರಾಜೆವಾಲೆ ಯವರು ಪಕ್ಷದ ಸಿದ್ದಾಂತಕ್ಕೆ ಬದ್ಧರಾಗಿ ಪ್ರಗತಿ ಪರ ಸಮಾಜಗಳು ಹಿಂದುಳಿದ ವರ್ಗಗಳು, ಪರಿಶಿಷ್ಟಜಾತಿ ಮತ್ತು ಪರಿಶುಷ್ಠ ಪಂಗಡಗಳು ಹಾಗೂ ಅಲ್ಪಸಂಖ್ಯಾಂತರ ಸಮುದಾಯಗಳು ಮತ್ತು ಇನ್ನಿತರೆ ದುಡಿಯುವ ವರ್ಗಗಳ ಜೊತೆ ಸಂಪರ್ಕವನ್ನು ಇಟ್ಟು–ಕೊಂಡು ಬೀದರ್ ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೋಕುಗಳಲ್ಲಿ ಪ್ರವಾಸ ಹಮ್ಮಿಕೊಂಡು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಸಮಾಲೋಚನೆ ನಡೆಸಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಸಂಘಟನೆಗೆ ಮುಂದಾಗಬೇಕೆಂದು ರಾಜ್ಯಾಧ್ಯಕ್ಷರು.ಜಿ.ಎಂ.ಗಾಡ್ಕರ ಕೋರಿದ್ದಾರೆ.



ಬಸವಕಲ್ಯಾಣ:- ಇಲ್ಲಿನ ಬಂದವರ ಓಣಿ ಅಕ್ಕಮಹಾದೇವಿ ಗವಿಯಲ್ಲಿ ವೀರ ವೈರಾಗ್ಯನಿಧಿ ಅಕ್ಕಮಹಾದೇವಿಯವರ ಮೂರ್ತಿ ಅನಾವರಣ ಹಾಗೂ ಜಯಂತ್ಯುತ್ಸವದ ಕಾರ್ಯಕ್ರಮದ ನಿಮಿತ್ಯ 10 ದಿನಗಳವರೆಗೆ ವೈರಾಗ್ಯ ನಿಧಿ ಅಕ್ಕಮಹಾದೇವಿ ಯವರ ಜೀವನ ಚರಿತ್ರೆ ಕುರಿತು ಪ್ರವಚನಕಾರರಾದ ಬದಾಮಿ ಬೇಲೂರಿನ ಶ್ರೀ ಗುರು ಬಸವೇಶ್ವರ ಮಠದ ಪೂಜ್ಯಶ್ರೀ ಮ.ನಿ.ಪ್ರ ಡಾ. ಮಹಾಂತ ಬಸವಲಿಂಗ ಸ್ವಾಮಿಗಳು ನೀಡುತ್ತಿರುವುದು. (ಚಿತ್ರ ಮಲ್ಲಮ್ಮ ನುಡಿ ಚಿತ್ರ)

# ಬಸವಕಲ್ಯಾಣ: ನಿರಂತರವಾಗಿ ಉರಿಯುತ್ತಿರುವ ಬೀದಿ ದೀಪ



ಹಗಲು ಉರಿಯುತ್ತಿರುವ ವಿದ್ಯುತ್ ದ್ವೀಪ ಕಾಣಬಹುದು.

(ವರದಿ ಡಿ. ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹಗಲು ಹೊತ್ತಿನಲ್ಲಿ ನಿರಂತರವಾಗಿ ಉರಿಯುತ್ತಿರುವ ಬೀದಿ ದೀಪಗಳು ತಾಲೂಕಿನಂತೆ ವಿದ್ಯುತ್ ಸಮಸ್ಯೆ ಇದೆ ಕೆಲವು ಕಡೆ ವಿದ್ಯುತ್ ಪೂರೈಕೆ ಇಲ್ಲದೆ ಜನರು ಗೂಳಾಡುತಿದ್ದಾರೆ. ಗ್ರಾಮಿಣ ಭಾಗಗಳಲ್ಲಿ ಮತ್ತು ತಾಲೂಕ ಕೇಂದ್ರಗಳಲ್ಲಿ ರೈತರು ಹಾಗೂ ಕಾರ್ಮಿಕ ವರ್ಗದವರು ಸಮಸ್ಯೆ ಅನುಭವಿಸುತ್ತಿದ್ದಾರೆ. ವಿದ್ಯುತ್ ಸರಿಯಾಗಿ ಇರುವ ಕಡೆ ಮಿತವಾಗಿ ಬಳಿಸ ಬೇಕಾಗಿರುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಆದರೆ ಎಷ್ಟು ಕಡೆ ತಾಲೂಕು ಹಾಗೂ ಗ್ರಾಮಿಣ ಭಾಗದಲ್ಲಿ ರಾತ್ರಿವೇಳಿಗೆ ಉಪಯೋಗವಾಗುವ ಬೀದಿ ದೀಪಗಳು ಹಗಲು ಹೊತ್ತಿನಲ್ಲಿ ಕಾಣಿಸಿ ಕೊಳುತ್ತಿವೆ ಇದರಿಂದ ಬಾರಿ ಪ್ರಮಾಣದ ವಿದ್ಯುತ್ ವ್ಯತ್ತವಾಗುತ್ತಿದೆ. ಅನೇಕ ಗ್ರಾಮಿಣ ಭಾಗದಲ್ಲಿ ಯಾವುದೇ ವಿದ್ಯುತ್ ಕಬ್ಬಗಳಿಗೆ ಬೀದಿ ದೀಪಗಳು ಬೆಳಿಗಿನ ಹೊತ್ತಿನ ವೇಳೆಯಲ್ಲಿ ನಿರಂತರ ಜ್ಯೋತಿ ಯಡಿ. ನಿರಂತರವಾಗಿ ದೀಪಗಳು ಉರಿಯುತ್ತಿರುವುದು ಚಿತ್ರದಲ್ಲಿ ಕಾಣಬಹುದು. ಸುಮಾರು ಎರಡು ವರ್ಷಗಳಿಂದ ಹಗಲು ರಾತ್ರಿ ಎನ್ನದೆ ಬೀದಿ ದೀಪಗಳು ನಿರಂತರವಾಗಿ ಉರಿಯುತ್ತಿದೆ ಕೆಲವು ಕಡೆ ಬರಿ ರಾತ್ರಿ ಹೊತ್ತಿನಲ್ಲಿ ಉರಿಯುತ್ತಿವೆ ಕೆಲವು ಕಡೆ ನೀರತರ ಬೀದಿ ದೀಪ ಉರಿಯುತ್ತಿರುವ ಇಷ್ಟಾದರೂ ಸಂಬಂಧ ಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ ಕಡೆ ಗಮನ ಹರಿಸಿ ಮೌನವಾಗಿ ಕುಳಿತಿದ್ದಾರೆ. ಪ್ರತಿದಿನ ಹಗಲು ಹೊತ್ತಿನಲ್ಲಿ ನೂರಾರು ವಿದ್ಯುತ್ ದೀಪಗಳು ಉರಿಯುತ್ತಿರುವುದರಿಂದ ಎಷ್ಟು ವಿದ್ಯುತ್ ವ್ಯತ್ತವಾಗುತ್ತಿದೆ ಎಂಬುದು ಯಾರಿಗೂ ತಿಳಿಯುತ್ತಿಲ್ಲ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ ಕಡೆ ಗಮನ ಹರಿಸಿ ಆದಷ್ಟು ಬೇಗ ರಾತ್ರಿ ಹೊತ್ತಿನಲ್ಲಿ ಉರಿಯುವಂತೆ ಕಾರ್ಯಕೈಗೂಳಬೇಕು. ಇದರಿಂದ ವಿದ್ಯುತ್ ಉಳಿತಾಯವಾಗಿದರೆ ರೈತರ ಕೊಳವೆಬಾವಿಗಳಿಗೆ ಅನುಕೂಲವಾಗುವಂತೆ ಆಗುತ್ತದೆ. ಎಷ್ಟು ಗಾಮ ಗ್ರಾಮಗಳಲ್ಲಿ ವಿದ್ಯುತ್ ಇಲ್ಲದೆ ವಿದ್ಯಾರ್ಥಿಗಳಿಗೆ ರೈತಾಪಿ ವರ್ಗಕ್ಕೆ ತೊಂದರೆ ಯಾಗುತ್ತಿದೆ ಇಥಹ ಸಂದರ್ಭದಲ್ಲಿ ನಿರಂತರವಾಗಿ ಉರಿಯುವ ವಿದ್ಯುತ್ ದೀಪಗಳಿಗೆ ಕಡಿವಾಣ ಹಾಕುರುಯಾರು? ಕೆಲವು ವರ್ಷಗಳ ಹಿಂದೆ ಪ್ರತಿ ಗ್ರಾಮ ಪಂಚಾಯಿತಿನವರು ಗ್ರಾಮಗಳಲ್ಲಿ ಒಂದೆಡೆ ಸ್ವಿಚ್ ಅಳವಡಿಸಿ ಗ್ರಾಮ ಪಂಚಾಯಿತ ವಾಟರ್ ಮಾನಗಳು ದಿನಾಲು ಬೆಳಗಿನ ಸಂದರ್ಭದಲ್ಲಿ. ದೀಪ ಆರಿಸುತ್ತಿದರು ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಬೀದಿ ದೀಪಗಳು ನಿರ್ವಹಣೆ ಮಾಡಿದವರಿಗೆ ವಿದ್ಯುತ್ ಪೋಲಾಗುತ್ತಿರುವ ಬಗ್ಗೆ ಅರಿವು ಮೂಡಿಸಬೇಕು ಅಂದಾಗ ಮಾತ್ರ ವಿದ್ಯುತ್ ಸೋರಿಕೆ ಸಮಸ್ಯೆ ಅದೃಷ್ಟು ಹತೋಟಿಗೆ ಬರಲಿದೆ ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ಆದಷ್ಟು ಬೇಗ ಹಗಲು ಹೊತ್ತಿನಲ್ಲಿ ಬೀದಿ ದೀಪಗಳು ಉರಿಯುತ್ತಿರುವುದು ಕಡಿಮೆ ಯಾಗುತ್ತಿದೆ ಇಲ್ಲ ಎಂಬುದು ಮುಂದಿನ ದಿನಗಳಲ್ಲಿ ಕಾದುನೂಡಬೇಕಾಗಿದೆ.



ಬಸವಕಲ್ಯಾಣ :- ಕಚುಸಾಪ ರಾಜ್ಯ ಸಂಚಾಲಕರಾದ ಕೃಷ್ಣ ಮೂರ್ತಿ ಕುಲಕರ್ಣಿಯವರು ಮಲ್ಲಮ್ಮ ನುಡಿ. ಪ್ರಾದೇಶಿಕ ಕನ್ನಡ ದಿನಪತ್ರಿಕೆ ಓದುತ್ತಿರುವದು. ಈ ವೇಳೆ ತಾಲೂಕಿನ ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆಯ ವರದಿಗಾರರಾದ ಡಿ. ಕೆ. ಪ್ರಹ್ಲಾದ. ಹಾಗೂ ಡಾ. ಶರಣಪ್ಪ ಗದಲೇಗಾಂವ ಚಿತ್ರದಲ್ಲಿ ಕಾಣಬಹುದು.

# ಮಹಾವೀರ ಜಯಂತಿ ಅರ್ಥಪೂರ್ಣವಾಗಿ ಆಚರಣೆಗೆ ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಎ.9 -ಜಿಲ್ಲಾಡಳಿತದವತಿಯಿಂದ ಜಿಲ್ಲೆಯಲ್ಲಿ ಏ.10ರಂದು ಮಹಾವೀರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಅವರ ಅಧ್ಯಕ್ಷತೆಯಲ್ಲಿ ಇಂದು ಮಹಾವೀರ ಅವರ ಜಯಂತಿ ಆಚರಣೆಕುರಿತುನಡೆದಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಬರುವ ಏಪ್ರೀಲ್ 10 ರ ಬೆಳಿಗ್ಗೆ 11 ಗಂಟೆಗೆ ಮಹಾವೀರ ಅವರ ಜಯಂತಿಯನ್ನು ನಗರದ ಚಕ್ಕರ್ ಕಟ್ಟಾ, ಮಹಾವೀರ ಭವನ ಸಭಾಂಗಣದಲ್ಲಿ ಆಚರಿಸಲು ನಿರ್ಧರಿಸಲಾಗಿದ್ದು, ಅವಶ್ಯಕ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಅಂದು ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ, ವೇದಿಕೆ ಸಿದ್ದತೆ ಮಾಡಿಕೊಳ್ಳುವಂತೆ ಹಾಗೂ ನುರಿತ ಉಪನ್ಯಾಸಕರನ್ನು ಆಹ್ವಾನಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಮೆರವಣಿಗೆ ಕುರಿತು ಮುಂಚಿತವಾಗಿ ತಿಳಿಸಬೇಕು. ಜಿಲ್ಲಾ ,ಗ್ರಾಮ ಪಂಚಾಯತ್, ತಾಲೂಕ ಮಟ್ಟ ಹಾಗೂ ಶಾಲಾ, ಕಾಲೇಜು, ಕಚೇರಿಯಲ್ಲಿ ಜಯಂತಿ ಆಚರಣೆಗೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ಎರಡು ವರ್ಷಗಳಲ್ಲಿ ಲೋಕಸಭಾ, ವಿಧಾನ ಸಭಾ ಚುನಾವಣೆ ಗಳ ಹಿನ್ನೆಲೆಯಲ್ಲಿ ಮಹನೀಯರ ಜಯಂತಿ ಸರಳವಾಗಿ ಆಚರಿಸಲಾಗಿದೆ. ಈ ಬಾರಿ ಕಾರ್ಯಕ್ರಮವು ಶಿಸ್ತುಬದ್ದವಾಗಿ ನಡೆಯಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಹಾಜರಿರಬೇಕು.

ಜಯಂತಿಯಂದು ಸೂಕ್ತ ಪೋಲಿಸ್ ಬಂದೋಬಸ್ತ್, ಮಾಡಲು ಅವರು ಸೂಚಿಸಿದರು.

# ತಹಶೀಲ್ ಕಚೇರಿಯ ಪ್ರಥಮ ದರ್ಜೆ ಸಹಾಯಕ ಪ್ರದೀಪ್ ಲಾಡೆ ಅವರನ್ನು ಅಮಾನತುಗೊಳಿಸಲು ಕನ್ನಡ ಸೇನೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಕರ್ನಾಟಕ ಸರ್ಕಾರಿ ನೌಕರರ ಸಂಘದ ನಿರ್ದೇಶಕರು ಹಾಗೂ ತಹಶೀಲ್ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕ ರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರದೀಪ ಲಾಡೆ ಅವರು ಕರ್ತವ್ಯ ಲೋಪವೇಸಗುತ್ತಿದ್ದಾರೆ ಎಂದು ಬುಧವಾರ ಕನ್ನಡ ಸೇನೆ ಕರ್ನಾಟಕ ಸಂಘಟನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ಆರೋಪಿಸಿದ್ದಾರೆ. ದಿನ ನಿತ್ಯ ತಹಶೀಲ್ ಕಚೇರಿಗೆ ಗ್ರಾಮೀಣ ಭಾಗದಿಂದ ಸಾವಿರಾರು ಬಡ ಜನರು ತಮ್ಮ ಕೆಲಸ ಕಾರ್ಯಕ್ಕಾಗಿ ಬರುತ್ತಿರುತ್ತಾರೆ. ಸಿಂಧುತ್ವ ಮಾಡಲು ಸಾಕಷ್ಟು ವಿಳಂಬ ಮಾಡುತ್ತಿದ್ದಾರೆ. ಹಲವು ಪ್ರಕರಣಗಳಲ್ಲಿ ಲಂಚಕೊಟ್ಟರೆ ಮಾತ್ರ ಸಿಧುತ್ವ ಮಾಡಿಕೊಡುವುದು, ಲಂಚಕೊಟ್ಟರೆ ಮಾತ್ರ ಯಾವುದೇ ದಾಖಲೆ ಪಡೆಯೋದು ಎಂಬ ರೀತಿಯಾಗಿದೆ. ಹಲವು ಪ್ರಕರಣಗಳು ಇದೇ ರೀತಿ ಕಂಡು ಬಂದಿದೆ" ಎಂದು ವಿವರಿಸಿದರು. ಮಂಗಳವಾರ ಒಬ್ಬರು ಸಿಂಧುತ್ವ ಮಾಡಿಸಿಕೊಳ್ಳಲು ಕಚೇರಿಗೆ ಬಂದಾಗ ಈ ಕೆಲಸ ಮಾಡಲು 6 ಸಾವಿರ ರೂಪಾಯಿ ಖರ್ಚು ಆಗುತ್ತದೆ ಎಂದು ಪ್ರಥಮ ದರ್ಜೆ ಸಹಾಯಕ ಹೇಳಿದ್ದಾರೆ ಎಂದು ತಹಸೀಲ್ದಾರ್ ಅವರಿಗೆ ಬರೆದ ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಇವರನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಲು ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಸುಭಾಷ್ ಕೆನೆಡೆ, ತಾಲೂಕಾಧ್ಯಕ್ಷ ಪವನ ಪೂಜಾರಿ, ಕಲ್ಲಪ್ಪ ಸಾಗರ, ನಾಗರಾಜ ಹುಡಗಿ, ಕಾಶಿನಾಥ್ ರೇಕುಳಗಿ, ತಿಪ್ಪಣ್ಣ ರೆಡ್ಡಿ, ಶೇಕ್ ಜಮಾದರ್ ಆರ್ಷದ್, ಗುಂಡಪ್ಪ ಪೂಜಾರಿ, ದಸ್ತಗಿರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಲೋಟಸ್ ಡಿ- ಫಾರ್ಮಸಿ ಕಾಲೇಜಿಗೆ ಶೇ.100ರಷ್ಟು ಫಲಿತಾಂಶ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಪಟ್ಟಣದ ಲೋಟಸ್ ಡಿ-ಫಾರ್ಮಸಿ ಕಾಲೇಜಿನ ದ್ವಿತೀಯ ವರ್ಷದ ಡಿ- ಫಾರ್ಮಸಿ ಫಲಿತಾಂಶ ನೂರಕ್ಕೆ ನೂರರಷ್ಟು ಆಗಿದ್ದು ಪರೀಕ್ಷೆಗೆ ಹಾಜರಾದ ಒಟ್ಟು 35 ವಿದ್ಯಾರ್ಥಿಗಳಲ್ಲಿ 2 ಪ್ರಥಮ ಶ್ರೇಣಿ (ಡಿಸ್ಟಿಂಕ್ಷನ್),21 ಪ್ರಥಮ ದರ್ಜೆ ಹಾಗೂ 12 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೆ- ೇರ್ಗಡೆ ಯಾಗಿದ್ದಾರೆ. ಕುಮಾರಿ ಅಪ್ಸಾನಾ ಯಲಗೋಡ ಶೇ. 79 ( 869/1100) ಪಡೆದು ಕಾಲೇಜಿಗೆ ಪ್ರಥಮ ಸ್ಥಾನ, ಕುಮಾರಿ ಫೌಜಿಯಾ ಸುಲ್ತಾನಾ ಅಬ್ದುಲ್ ಗನಿ ಮಕಾಂದಾರ ಶೇ. 77 ( 850/1100) ಗಳಿಸಿ ದ್ವಿತೀಯ ಸ್ಥಾನ, ಕುಮಾರ ಅಶ್ಪಾಕ್ ಶೇ. 73 ( 805/1100) ತೃತೀಯ ಸ್ಥಾನ, ಕುಮಾರಿ ಶಾಬೇರಾ ಮಕಾಂದಾರ ಶೇ. 72.45 ( 797/1100) ಪಡೆದು ನಾಲ್ಕನೇ ಸ್ಥಾನ ಹಾಗೂ ಕುಮಾರಿ ಶಾಹೀನಕೌಸರ ಕೊರ್ತಿ ಶೇ. 72.28 ( 795/1100) ಅಂಕಗಳಿಸಿ ಕಾಲೇಜಿಗೆ ಐದನೇ ಸ್ಥಾನವನ್ನು ಪಡೆದುಕೊಂಡಿದ್ದಾಳೆ. ವಿದ್ಯಾರ್ಥಿಗಳು ಈ ಅತ್ಯುತ್ತಮ ಸಾಧನೆಯನ್ನು ತೋರಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿರುವುದಕ್ಕೆ ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ, ಆಡಳಿತಾ ಧಿಕಾರಿ ಡಾ.ಅಬ್ದುಲ್ ರೆಹಮಾನ್ ನಮಾಜಕಟ್ಟಿ, ಕಾರ್ಯದರ್ಶಿ ನೂರ್ ನಮಾಜಕಟ್ಟಿ, ಪ್ರಾಚಾರ್ಯ ಸಿರಾಜ್ ಹಾಗೂ ಉಪನ್ಯಾಸಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಭಾಗ್ಯಶ್ರೀ ಮತ್ತು ಮಹಾಲಕ್ಷ್ಮೀ ಅಗ್ರ ಶ್ರೇಣಿಯಲ್ಲಿ ಉತ್ತೀರ್ಣ





ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಪ್ರಸಕ್ತಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿನ ತಾಳಮಡಗಿ ಗ್ರಾಮದ ಸರ್ಕಾರಿ ಬಸವೇಶ್ವರ ಕಾಲೇಜಿನ ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣಗೊಂಡಿದ್ದಾರೆ. ಭಾಗ್ಯಶ್ರೀ ತಂದೆ ನರಸಪ್ಪ (520) 86.66% ಅಂಕ ಪಡೆದುಕೊಂಡು ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಮಹಾಲಕ್ಷ್ಮಿ ತಂದೆ ಶಿವಪುತ್ರ (495) 82.5% ದ್ವಿತೀಯ ಸ್ಥಾನ ಪಡೆದುಕೊಂಡರೆ ಭಾಗ್ಯಶ್ರೀ ತಂದೆ ರಾಜಕುಮಾರ (419) 69.83% ಹಾಗೂ ನಂದಿನಿ ಅಂಬಣ್ಣ (376) 62.66% ಅಂಕ ಪಡೆದುಕೊಂಡು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಕಾಲೇಜು ಹೆಸರು ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಪ್ರಾಚಾರ್ಯರಾದ ಹಣಮಂತ ಪಿ.ಗೌಡಗಾಂವಕರ, ಉಪನ್ಯಾಸಕರಾದ ರವೀಂದ್ರರೆಡ್ಡಿ,, ಸಂಜುಕುಮಾರ ಜುಮ್ಮಾ, ಸುನೀಲಕುಮಾರ, ಪ್ರೀತಿ, ಸಂಗೀತಾ, ಸಿಬಿಸಿ ಉಪಾಧ್ಯಕ್ಷರಾದ ಈಶ್ವರ ನೇಳಗಿ ಸೇರಿಗ್ರಾಮದ ಗಣ್ಯರು ಹಾಗು ಶಿಕ್ಷಣ ಪ್ರೇಮಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳದ ಪೂರ್ವಭಾವಿ ಸಭೆ

# ನಿರುದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲಾಭ ಪಡೆಯಿರಿ: ಸಿಇಒ ರಾಹುಲ್ ಪಾಂಡ್ವೆ




ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್ 09- ಕಲಬುರಗಿ ನಗರದ ಕೆ.ಸಿ.ಟಿ. ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಏಪ್ರಿಲ್ 16 ರಂದು ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಜಿಲ್ಲೆಯ ನಿರುದ್ಯೋಗಯುವಕ-ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಲಾಭ ಪಡೆಯುವಂತೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ ಅವರು ಮನವಿ ಮಾಡಿದರು.

ಏಪ್ರೀಲ್ 08ರ ಮಂಗಳವಾರದಂದು ನಗರದ ಜಿಲ್ಲಾ ಪಂಚಾಯತಿಯ ಜಲ ನಿರ್ಮಲ ಸಭಾಂಗಣದಲ್ಲಿ ನಡೆದ ಕಲಬುರಗಿ ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಿರುದ್ಯೋಗ ನಿವಾರಣೆ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯು ನಿರಂತರವಾಗಿ ಈ ರೀತಿಯ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದ ಬೇರೆ, ಬೇರೆ ಭಾಗಗಳಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ವೃತ್ತಿಪರ ಕೌಶಲ್ಯ ಹೆಚ್ಚಿಸಲು ನಿರಂತರ ತರಬೇತಿ, ಕಾರ್ಯಾಗಾರ ಸಹ ಆಯೋಜಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದ ಯುವಕರಿಗೆ ಕಾಲೇಜುವಾರು ಕಾರ್ಯಾಗಾರ ಆಯೋಜಿಸಿದ್ದು, ಇದರ ಲಾಭ ನಿರುದ್ಯೋಗಿ ಸಮುದಾಯದ ಅರ್ಹ ಫಲಾನುಭವಿಗಳು ಪಡೆಯಬೇಕು ಎಂದರು.


22 ಸಾವಿರ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ: ಬೆಂಗಳೂರಿನ 125 ಸೇರಿದಂತೆ ಹೈದರಾಬಾದ್, ಮುಂಬೈ ಹಾಗೂ ಸ್ಥಳೀಯ ಸುಮಾರು 216 ಕಂಪನಿಗಳು ಈಗಾಗಲೆ ಮೇಳದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿವೆ. ಇದುವರೆಗೆ ಸುಮಾರು 7 ಸಾವಿರ ಅಭ್ಯರ್ಥಿಗಳು ಸಹ ನೋಂದಣಿ ಮಾಡಿದ್ದು, ಕಲಬುರಗಿ ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ ಒಟ್ಟು ಸುಮಾರು 22 ಸಾವಿರ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ ಹೊಂದಲಾಗಿದೆ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ನೋಂದಣಿ ಪ್ರಕ್ರಿಯೆ ನಿರಂತರವಾಗಿ ನಡೆಯಲಿದ್ದು, ಆನ್‌ಲೈನ್ ಮೂಲಕ https://skill-connect.kaushalkar.com ನೊಂದಾಯಿಸಿಕೊಂಡು ಅಥವಾ ಅಂದೇ ನೇರವಾಗಿಯೂ ಮೇಳದಲ್ಲಿ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ ಎಂದರು.

ಸಚಿವರಿಂದ ಪೋಸ್ಟರ್ ಬಿಡುಗಡೆ: ಇದೇ ಏಪ್ರೀಲ್ 16ರಂದು ಕಲಬುರಗಿಯಲ್ಲಿ ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳದ ಅಂಗವಾಗಿ ಏ.07ರ ಸೋಮವಾರ ದಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು. ಈ ವೇಳೆ ಮಹಿಳಾ ಮುಖಂಡರಾದ ಶ್ರೀಮತಿ ನಿರ್ಮಲ ಬೆಣ್ಣೆ ಸೇರಿದಂತೆ ಇತರರು ಇದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪೂರೆ, ಜಿಲ್ಲಾ ಪಂಚಾಯತ್ ಮುಖ್ಯಯೋಜನಾಧಿಕಾರಿಗಳಾದ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವ ಕೆಸರಟ್ಟಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಜಿ.ಯು.ಹುಡೇದ್, ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜಶೇಖರ ಪಾಟೀಲ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಪ್ರಕಾಶ್, ಲೀಡ್ ಬ್ಯಾಂಕ್ ಮ್ಯಾನೇಜರ್ ಟಿ.ತಿರುಮಲ್ಲ, ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಕೆ.ಬಿ.ಬಡಿಗೇರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸಂಗಮೇಶ, ಕಾರ್ಮಿಕ ಇಲಾಖೆಯ ಅಧಿಕಾರಿ ಆರತಿ, ಆರ್ಸೆಟ್ ನಿರ್ದೇಶಕರಾದ ವಿಜಯಕುಮಾರ್, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ತರಬೇತಿ ಅಧಿಕಾರಿ ಅನಿಲ್ ಕುಮಾರ ಜಿಂದೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ತರಬೇತಿ ಅಧಿಕಾರಿ ಸದಾಶಿವಪ್ಪ ಸೇರಿದಂತೆ ಇತರರು ಇದ್ದರು.

# ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮ ಇಂದು



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಏ 9 ಮಹಾತ್ಮ ಬಸವೇಶ್ವರರ 75 ನೇ ಜಾತ್ರಾ ಅಮೃತ ಮಹೋತ್ಸವದ ನಿಮಿತ್ತವಾಗಿ ಇಲ್ಲಿನ ಅಕ್ಕ ಮಹಾದೇವಿ ಕಾಲೇಜಿನ ಆವರಣದಲ್ಲಿ ಇಂದು ದಿನಾಂಕ 10 ರಂದು ಮುಂಜಾನೆ 6 ಗಂಟೆಗೆ ಆಧ್ಯಾತ್ಮಿಕ ಪ್ರವಚನ ಉದ್ಘಾಟನೆಯ ಕಾರ್ಯಕ್ರಮದ ದಿವ್ಯ ಸಾನಿಧ್ಯ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿ. ದಿವ್ಯ ನೇತೃತ್ವ ಖೇಳಗಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಶಿವಲಿಂಗ ಸ್ವಾಮೀಜಿ. ಅನುಭವ ಮಂಟಪ ಟ್ರಸ್ಟಿನ ಸಂಚಾಲಕರಾದ ಪೂಜ್ಯ ಶ್ರೀ ಶಿವಾನಂದ ದೇವರು. ಉದ್ಘಾಟನೆ ಅಭಿವೃದ್ಧಿ ಮಂಡಳಿ ಆಯುಕ್ತರಾದ ಜಗನ್ನಾಥ ರೆಡ್ಡಿ. ಅಧ್ಯಕ್ಷತೆ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷರಾದ ಬಸವರಾಜ ಕೊರಕೆ. ಮುಖ ಅತಿಥಿಗಳಾಗಿ ನಗರ ಸಭೆಯ ಪೌರಾಯುಕ್ತರಾದ ರಾಜು ಬಣಗಾರ. ಗೌರವ ಉಪಸ್ಥಿತಿ ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಕಾರ್ಯದರ್ಶಿಗಳಾದ ವಿವೇಕಾನಂದ ಹೂದಲೂರೆ ಸ್ವಾಗತಿಸುವರು. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ವಿಶ್ವಸ್ಥ ಸಮಿತಿಯಿಂದ ವತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತುರ್ತು ಆರೈಕೆ ಚೇತರಿಕೆ ಕೇಂದ್ರ ಸ್ಥಾಪಿಸಲು ಆಸಕ್ತಿ ಅಭಿವ್ಯಕ್ತಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ;ಏಪ್ರಿಲ್.9: ಮಾನಸಿಕ ಆರೋಗ್ಯದಿಂದ ಬಳಲುತ್ತಿರುವ ನಿರಾಶ್ರಿತರಿಗೆ ಪತ್ತೆ ಹಚ್ಚಿ ಚಿಕಿತ್ಸೆ ಹಾಗೂ ಉಪಾಚಾರ ನೀಡಲು ಸರ್ಕಾರೇತರ ಸಂಸ್ಥೆಗಳು ತುರ್ತು ಆರೈಕೆ ಚೇತರಿಕೆ ಕೇಂದ್ರ (Emergency Care Recovery Centre) ಪ್ರಾರಂಭಿಸುವ ಸಲುವಾಗಿ ಆಸಕ್ತಿ ಅಭಿವ್ಯಕ್ತಿ (ಇಓಐ) ಆಹ್ವಾನಿಸಲಾಗಿದೆ ಎಂದು ಬೀದರ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತಿಯುಳ್ಳ ಅರ್ಹ ಸರ್ಕಾರೇತರ ಸಂಸ್ಥೆಗಳು ದಿನಾಂಕ: 29-04-2025 ರೊಳಗಾಗಿ ಸಲ್ಲಿಸುವಂತೆ ಅವರು ತಿಳಿಸಿದ್ದಾರೆ.

# ಪ್ರತಿಯೊಬ್ಬ ರೈತ ಐದು ಗಿಡ ಮರ ಬೆಳೆಸಲು ಸಿದ್ರಾಮಯ್ಯ ಸ್ವಾಮಿ ಕರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ:ಏ.9:ಪ್ರತಿಯೊಬ್ಬ ರೈತರುಸರ್ಕಾರದಿಂದನೀಡುವ ಸಬ್ಸಿಡಿದರದಲ್ಲಿಬೀಜ,ಗೊಬ್ಬರ ಹಾಗೂಯಂತ್ರೋಪಕರಣಗಳು ಪಡೆಯುವ ಸಂದರ್ಭದಲ್ಲಿ ರೈತರುಐದುಗಿಡಗಳು(ಮಾವು, ನೆಲ್ಲೆಕಾಯಿ,ಬೇವಿನ,ಸಪೋಟಾ ಜಾಪುಳ)ಹಾಗೂಸುತ್ತಮುತ್ತ ಇತರೆ ಮರ ಗೀಡಗಳನ್ನು ಬೆಳೆಸಬೇಕೆಂದು ಬೀದರ ತಾಲ್ಲೂಕುಕೃಷಿಕಸಮಾಜದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಸಿದ್ರಾಮಯ್ಯಾ ಎಸ್.ಸ್ವಾಮಿ ಕರೆ ನೀಡಿದರು

ಅವರುಬೀದರಸಹಾಯಕ ಕೃಷಿನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಯಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಹಾಗೂ ಮುಂಗಾರುಹಂಗಾಮಿನಸಿದ್ಧತೆ ಕುರಿತುಕರೆದಸಭೆಯಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶೇಷವಾಗಿ ಸಿರಿಧಾನ್ಯ ಬೆಳೆಯಲು ಹಾಗೂ ಅದರ ಮಹತ್ವದ ಬಗ್ಗೆ ಸರಕಾರದ ಯೋಜನೆಯಸದುಪಯೋಗವನ್ನು ಜಿಲ್ಲೆಯ ರೈತಬಾಂಧವರು ಪಡೆದುಕೊಳ್ಳಬೇಕೆಂದರು.

ಬೀದರ ಸಹಾಯಕ ಕೃಷಿ ನಿರ್ದೇಶಕರಾದ ಅನ್ಸಾರಿ ಎಮ್.ಎ.ಕೆ ಅವರು ಕೃಷಿ ಇಲಾಖೆವತಿಯಿಂದದೊರೆಯುವ ಸೌಲಭ್ಯಗಳು ಹಾಗೂ ಕೃಷಿ ಭಾಗ್ಯ ಯೋಜನೆಯ ಕೃಷಿ ಹೊಂಡಗಳ ಪ್ರಚಾರ ಮಾಡಿ ರೈತರಿಗೆ ಪ್ರಯೋಜನೆ ಪಡೆಯುವಂತಾಗಬೇಕು. ಸರ್ಕಾರದ ಸಹಾಯ ಧನ ದಲ್ಲಿದೊರೆಯುವ ತುಂತುರು ನೀರಾವರಿ ಘಟಕ, ಕೃಷಿ ಯಾಂತ್ರಿಕರಣ, ಸಮಗ್ರ ಕೃಷಿ ಪದ್ಧತಿ, ಬಿತ್ತನೆ ಬೀಜದ ಕುರಿತು ಸಭೆಗೆ ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆಯಿಂದ ಆರ್.ಕೆ.ವಿ.ವೈ ಯೋಜನೆಯಡಿ ಕೃಷಿಕ್‌ಯಾಂತ್ರಿಕರಣಶೇಖರಣ ಘಟಕಗಳು ಹಾಗೂ ಎನ್. ಎಚ್.ಎಮ್ ಯೋಜನೆಯಡಿ ಪ್ಯಾಕ್‌ಹೌಸ್, ಸೋಲಾರ ಘಟಕಗಳ ವಿವರವಾದ ಮಾಹಿತಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ ಸೇವಂತಿ ನೀಡಿದರು. ಹಾಗೂ ತಾಲ್ಲೂಕಿನಲ್ಲಿ 95 ಎಕರೆ ರೇಷ್ಮೆ ಬೆಳೆಯಿದ್ದು 45 ರೈತರು ಫಲಾನುಭವಿಯಾಗಿರುತ್ತಾರೆ. ರೇಷ್ಮೆಹುಳು ಸಾಕಾಣಿಕೆ ಸಮಾನ್ಯ ವರ್ಗದ ರೈತರಿಗೆ 75% ಮತ್ತು ಪ.ಜಾತಿ/ಪ.ಪಂಗಡ ರೈತರಿಗೆ 90% ರಂತೆ ಸಹಾಯಧನ ದೊರೆಯುವ ಮಾಹಿತಿಯನ್ನು ರೇಷ್ಮೆ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಕಿರಣಕುಮಾರ ನೀಡಿದರು,

ಮೀನುಗಾರಿಕೆ ಇಲಾಖೆಯ ಕೃಷಿನಿರ್ದೇಶಕರಾದರೇಹಮಾನ್ ಮಾತನಾಡಿ, ತಾಲ್ಲೂಕಿನಲ್ಲಿ 28 ಕೆರೆಗಳಿದ್ದು, ಟೆಂಡರ್ ಮತ್ತು ಸಂಸ್ಥೆಗಳ ಮೂಲಕ ಹರಾಜು ಮಾಡಲಾಗಿದೆ, ಮೀನುಗಾರಿಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳಾದ ಮೀನುಬಲೆ ಮೀನುಹೊಂಡದಸದುಪಯೋಗ ಪಡೆದುಕೊಳ್ಳಬೇಕೆಂದರು.

ಪಶು ಇಲಾಖೆಯಿಂದ ಪ್ರತಿ ವರ್ಷದಲ್ಲಿ ಎರಡು ಬಾರಿಯಂತೆ ಕಾಲು ಬಾಯಿ ರೋಗದ ಲಸಿಕೆ ನೀಡಲಾಗುತ್ತಿದೆಯೆಂದರು. ಹಾಗೂ ಪಶು ಇಲಾಖೆಯಿಂದ ಕೌ–ಮ್ಯಾಟ್, ಚಾಫ್ ಕಟರ್‌ಗಳನ್ನು ಸಹಾಯಧನದಲ್ಲಿ ವಿತರಿಸುವ ಮಾಹಿತಿಯನ್ನು ನೀಡಿದರು.

ಕೃಷಿ ಸಂಶೋಧನ ಕೇಂದ್ರದ ಮುಖ್ಯಸ್ಥರಾದ ಡಾ. ಭವಾನಿ ಸಿರಿಧಾನ್ಯ ಬೆಳೆಗಳ ಮಹತ್ವದ ಅರಿವು, ಅವುಗಳ ಸೇವನೆಯಿಂದ ಆರೋಗ್ಯದ ವೃದ್ಧಿ ಹಾಗೂ ದೈನಂದಿನ ಉಪಹಾರದಲ್ಲಿ ಸಿರಿಧಾನ್ಯ ಬೆಳೆಗಳ ಬಳಕೆಯ ಕುರಿತು ತಿಳಿಸಿದರು.

ಈ ಸಭೆಯಲ್ಲಿ ಸಂಜುಕುಮಾರ ಶರಣಪ್ಪಾ ಖಜಾಂಚಿ, ದಯಾನಂದ ಸ್ವಾಮಿ ಜಿಲ್ಲಾ ಪ್ರತಿ ನಿಧಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಮನ್ಮಥಸ್ವಾಮಿ, ನಂದಕುಮಾರ ಪಾಟೀಲ್, ವೈಜಿನಾಥಭುಯ್ಯಾ, ನಾಗಯ್ಯಾ ಸ್ವಾಮಿ, ಮಹಾದೇವ ಸ್ವಾಮಿ, ಅಶೋಕ್ ಬಿರಾದಾರ ಮತ್ತು ನಾಗಯ್ಯಾಹೀರೆಮಠಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕರ್ನಾಟಕ ಕಾಲೇಜು: 28 ವಿದ್ಯಾರ್ಥಿಗಳಿಗೆ ಅಗ್ರಶ್ರೇಣಿ








ಮಲ್ಲಮ್ಮ ನುಡಿ ವಾರ್ತೆ

ಬೀದರ್:ಏ.9:ಪ್ರಸಕ್ತ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಕರ್ನಾಟಕ ಪದವಿಪೂರ್ವ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನ 28 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಗಮನ ಸೆಳೆದಿದ್ದಾರೆ.

ಕಾಲೇಜಿಗೆ ಶೇ 75.29 ರಷ್ಟು ಫಲಿತಾಂಶ ದೊರೆತಿ–ದ್ದು, 165 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 57 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ.

ಜಿಲ್ಲೆಯ ವಾಣಿಜ್ಯ ವಿಭಾಗದ ಅನುದಾನಿತ ಕಾಲೇಜುಗಳ ಟಾಪ್ 10 ವಿದ್ಯಾರ್ಥಿಗಳಲ್ಲಿ ಕರ್ನಾಟಕ ಕಾಲೇಜಿನ ನಾಲ್ವರು ಸೇರಿದ್ದಾರೆ. ಶೇ 95 ರಷ್ಟು ಅಂಕ ಗಳಿಸಿರುವ ಶ್ರೇಯಾ ಮಲ್ಲಿಕಾರ್ಜುನ ಜಿಲ್ಲೆಯಅನುದಾನಿತ ಕಾಲೇಜುಗಳಲ್ಲೇ ವಾಣಿಜ್ಯವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.

ವಾಣಿಜ್ಯವಿಭಾಗದಲ್ಲಿ ಸಪ್ನಾ ರಾಜಕುಮಾರ ಶೇ 94.67, ಸಮತಾ ಮುಖೇಶ ಮಹೇಶ್ವರ ಶೇ 94.50, ಭವಾನಿ ಪಂಡಿತ ಶೇ 94.33, ಶ್ರುತಿ ಗುಪ್ತಾ ಶೇ 91.67, ಭೂಮಿಕಾ ಚನ್ನಬಸಪ್ಪ ಶೇ 91.50, ಬಿ. ಸಂಜನಾ ಶೇ 91.33, ಶ್ರೀದೇವಿ ಗುಂಡಪ್ಪ ಶೇ 91.33, ಅರ್ಪಿತ ಕುಮಾರ ಸಂಜುಕುಮಾರ ಶೇ 91.17, ಸರ್ವೇಶ ಪ್ರಭಾಕರ ಶೇ 91.17, ವೈಷ್ಣವಿ ಭೀಮರಾವ್ ಶೇ 90.33, ಅಂಜಲಿ ಶಿವಾಜಿರಾವ್ ಶೇ 90, ಸುಮೇಧಾ ಸಮ್ಮೇಟ ಧನ್ನೂರ ಶೇ 89.50, ಶಿವಾನಂದ ರಾಚಪ್ಪ ಶೇ 88.33, ವೈಷ್ಣವಿ ಮಲ್ಲಿಕಾರ್ಜುನ ಶೇ 88, ಅಂಕಿತಾ ಸಂಜುಕುಮಾರ ಶೇ 88, ರಿಯಾ ವಿಜಯಕುಮಾರ ಶೇ 87.83, ಮೀನಾ ಮೋಹನರಾವ್ ಶೇ 86.33, ಚಂದ್ರಕಾಂತ ತುಕಾರಾಮ ಶೇ 85.17, ಎಜ್ರೆಲ್ ಯೇಶಪ್ಪ ಶೇ 85 ಅಂಕ ಗಳಿಸಿದ್ದಾರೆ.

ಕಲಾ ವಿಭಾಗದಲ್ಲಿದತ್ತುಕುಮಾರ ದಿಗಂಬರ ಶೇ 92.66, ಅವಿನಾಶ ಶಿವಪುತ್ರ ಶೇ 90, ಪರೇಶ ಸಂತೋಷ ಶೇ 88.83, ದತ್ತಾತ್ರಿ ಶಿವರಾಜ ಶೇ 88.16, ರಂಜನಾ ಜೈಚಂದ್ ಶೇ 87.66, ಮಹೇಶ್ ಬಂಡೆಪ್ಪ ಶೇ 85.33, ವಿಜ್ಞಾನ ವಿಭಾಗದಲ್ಲಿ ಪೂಜಾ ಜಿ. ಧನರಾಜ್ ಶೇ 86.66, ಭವಾನಿ ರಾಜೇಶ್ ಶೇ 86.16 ರಷ್ಟು ಅಂಕ ಪಡೆದು ಸಾಧನೆ ತೋರಿದ್ದಾರೆ ಎಂದು ಕಾಲೇಜು ಪ್ರಾಚಾರ್ಯ ಡಾ. ಬಸವರಾಜ ಬಲ್ಲೂರ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕೆಆ???ಇ ಸಂಸ್ಥೆಯ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಉಪಾಧ್ಯಕ್ಷ ಬಿ.ಜಿ. ಶೆಟಕಾರ್, ಕಾರ್ಯದರ್ಶಿ ಸತೀಶ ಪಾಟೀಲ, ಜಂಟಿ ಕಾರ್ಯದರ್ಶಿ ಶಿವಾನಂದ ಗಾದಗೆ, ಆಡಳಿತಾಧಿಕಾರಿ ಪ್ರೊ. ಎಸ್.ಕೆ. ಸಾತನೂರ, ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಕಾಲೇಜಿನ ಉಪನ್ಯಾಸಕರು ಸಂತಸ ವ್ಯಕ್ತಪಡಿಸಿದ್ದಾರೆ.

# ಪಿ. ಯು ಪರಿಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಭೋವಿ ವಡ್ಡರ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನ



ಬೀದರ :ಏ.9: ಜಿಲ್ಲೆಯ ಭೋವಿ ವಡ್ಡರ ಸಮಾಜದ ವಿದ್ಯಾರ್ಥಿಗಳು 2024–25ನೇ ಸಾಲಿನ ಪದವಿಪೂರ್ವ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದ ಪ್ರಯುಕ್ತ ಸಮಾಜದ ಬಾಂಧವರು ಹಾಗೂ ಬೀದರ ಜಿಲಾ ಭೋವಿ ವಡ್ಡರ ಸಮಾಜದ ಜಿಲ್ಲಾಧ್ಯಕ್ಷರಾದ ಸಂತೋಷ ಎಣಕುರೆಯವರು ಎಲ್ಲಾ ವಿದ್ಯಾರ್ಥಿಗಳಿಗೆಸನ್ಮಾನಿಸಿದರು ಈ ಸನ್ಮಾನದಲ್ಲಿ ಮಾರುತಿ ಎಣಕುರೆ, ಭಗತ ಸಿಂಧೆ, ಅಂಕುಶ ಶಿವರಾಜ ರಾಮ್ಲೆ ಭಾಗಿಯಾದರು.

ನಗರದ ಸಿದ್ಧಾರ್ಥ ಪದವಿ ಪೂರ್ವ ಕಾಲೇಜಿನ ಪಲ್ಲವಿ ವೆಂಕಟರಾಮ್ಲೆ ಕಲಾ ವಿಭಾಗ–95%, ವಿಶಾಲ ಜಗನ್ನಾಥ ರಾಮ್ಲೆ ಕಲಾ ವಿಭಾಗ–86.06% ಅರುಣ ಅಶೋಕ ಕಾಸ್ಲೆ ಕಲಾ ವಿಭಾಗ–81.06% , . ಸಾವಿತ್ರಾ ?ತುಕಾರಾಮ ಕಲಾ ವಿಭಾಗ– 74% ಹಾಗೂ ಭಾಲ್ಕಿ ಸಂಗಮೇಶ್ವರ ಪದವಿ ಪೂರ್ವ ಕಾಲೇಜಿನ ಅಂಜಲಿ ಗೋವಿಂದ ಸೂರ್ಯವಂಶಿ ವಿಜ್ಞಾನ ವಿಭಾಗ– 78.83% ಅತಿ ಹೆಚ್ಚು ಅಂಕಗಳು ಪಡೆದ ವಿದ್ಯಾರ್ಥಿಗಳಿಗೆ ಭೋವಿ ವಡ್ಡರ ಸಮಾಜ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

# ರೈತರ ಶ್ರೇಯೋಭಿಲಾಷಿಯಾಗಿ ನನ್ನ ಹೋರಾಟ:ಕ್ಷುಲ್ಲಕ ರಾಜಕೀಯಕ್ಕಲ್ಲ



ಹುಣಸಗಿ:ಏ.9:ಇತ್ತೀಚೆಗೆ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಯಾದಗಿರಿ ಜಿಲ್ಲೆ ಸೇರಿದಂತೆ ನಾರಾಯಣಪುರ ಎಡ ಮತ್ತು ಬಲದಂಡೆ ಕಾಲುವೆಗಳಿಗೆ ನೀರು ಹರಿಸುವಂತೆ ಮಾಜಿ ಶಾಸಕನಾಗಿ ರೈತರಶ್ರೇಯೋಭಿಲಾಷಿಯಾಗಿ ಹೋರಾಟ ಮಾಡಿದ್ದೆನೆ. ಇದರಲ್ಲಿ ಎಲ್ಲಾ ರೈತರ, ಸಂಘ ಸಂಸ್ಥೆಗಳು ಕೂಡಾ ಹೋರಾಟದಲ್ಲಿಕೈಜೋಡಿಸಿದ್ದಾರೆ. ರೈತರ ಭತ್ತ ಸೇರಿದಂತೆ ಹಿಂಗಾರು ಬೆಳೆಗಳಿಗೆ ನೀರು ಹರಿಸುವದಕ್ಕಾಗಿ ವಿವಿಧಹಂತದ ಹೋರಾಟ, ಮನವಿಗಳನ್ನು ಮಾಡಲಾಯಿತು.

ಇದರಲ್ಲಿ ಕ್ಷುಲ್ಲಕ ರಾಜಕೀಯ ನಾನು ಮಾಡಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಪತ್ರಿಕಾ ಹೇಳಿಕೆ ನೀಡುತ್ತಿರುವುದು ಖಂಡನೀಯ ಎಂದು ಮಾಜಿ ಶಾಸಕ ರಾಜುಗೌಡ ತಿಳಿಸಿದ್ದಾರೆ.

ನಮ್ಮ ಹೋರಾಟ ತೀವ್ರತೆ ಪಡೆದುಕೊಂಡಾಗ, ಕೋರ್ಟ ಆದೇಶದಿಂದ ಕಾಲುವೆಗೆ ನೀರು ಹರಿಸಿ ಸರಕಾರ ಮುಜುಗರಕ್ಕೆ ಈಡಾಗಿದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ರೈತರ ಹಿತ ಕಾಯಲು ಕೋರ್ಟ ಮೆಟ್ಟಿಲು ಏರಲು ನೀವೆ ಕಾರಣ. ಸರಕಾರ ಕೃಷ್ಣಾ ಕಾಲುವೆಗೆ ಐಸಿಸಿ ತೀರ್ಮಾನದಂತೆರೈತರಬೇಡಿಕೆಗೆ ಅನುಸಾರವಾಗಿ ನೀರು ಹರಿಸದೆ ಇದ್ದಾಗ ಕೋರ್ಟಗೆ ಅರ್ಜಿ ಸಲ್ಲಿಸಲಾಯಿತು. ಇದರಲ್ಲಿ ರಾಜಕೀಯ ಏನು ಬಂತು. ರೈತರ ಹಿತ ಕಾಯದೆ, ಕೋರ್ಟ ಆದೇಶದ ವಿರುದ್ಧ ಕೋರ್ಟಗೆ ಹೋದವರು ನೀವು. ಇದನ್ನು ರೈತ ಗಮನಿಸಲ್ಲಾ ಅಂದು–ಕೊಂಡರೆ, ಅದು ತಪ್ಪು.

ಆಡಳಿತ ಪಕ್ಷವಾಗಿ ನೀವು ಸಮಯೋಚಿತ ನಿರ್ಧಾರ ತೆಗೆದುಕೊಳ್ಳಲು ವಿಫಲವಾದಾಗ ವಿರೋಧ ಪಕ್ಷವಾಗಿ ರೈತರ ಬೇಡಿಕೆಗೆ ಹೋರಾಟ ಮಾಡುವುದು ನನ್ನ ಆದ್ಯ ಕರ್ತವ್ಯವಾಗಿದೆ. ಇದರೊಂದಿಗೆ ಐಸಿಸಿ ಸಭೆ ನಡೆದಾಗ ಜಿಲ್ಲಾ ಉಸ್ತುವಾರಿ ಸಚಿವರೆ ಗೈರಾಗುವುದು. ಇನ್ನು ಜಿಲ್ಲೆಯ, ತಾಲೂಕಿನ ಶಾಸಕರು ಗಟ್ಟಿ ಧ್ವನಿಯಿಂದ ಅಂಕಿ ಅಂಶ ಸಹಿತ ನೀರು ಹರಿಸಲು ಆಗ್ರಹ ಮಾಡದೆ ಮುಖ ಭಂಗವಾಗಿರೋದು ನಿಮಗೆ ಇದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಇನ್ನು ತೆಲಂಗಾಣಕ್ಕೆ ನೀರು ಹರಿಸಿದಾಗ ನಾನು ಬಸವ ಸಾಗರ ಜಲಾಶಯ ಹಾಗೂ ನಾರಾಯಣಪುರದ ಮುಖ್ಯ ಇಂಜಿನೀಯರ ಕಚೇರಿಗೆ ಭೆಟಿ ನೀಡಿ ಮಾಹಿತಿ ಪಡೆದು, ಗಲಾಟೆ ಮಾಡಿದಾಗ ನದಿಗೆ ನೀರು ಹರಿಸುವದನ್ನು ನಿಲ್ಲಿಸಲಾಯಿತು. ಹಾಗಾದರೆ ರಾತ್ರಿ ಕೃಷ್ಣೆಗೆ ನೀರು ಹರಿಸಿದರೂ ಕೂಡಾ ನೀವು ಸುಮ್ಮನೆ ಇರುವಿರಾ?. ಒಂದು ವೇಳೆ ಅದೇ ನೀರು ನಮ್ಮಲ್ಲಿ ಇದ್ದಿದ್ದರೆ, ನಮ್ಮ ರೈತರ ನೀರಿನ ಸಂಕಷ್ಟವಾದರೂ ತಪ್ಪುತ್ತಿತ್ತು. ಇದಕ್ಕೆ ಯಾರು ಹೊಣೆ. ಆದರೆ ತೆಲಂಗಾಣಕ್ಕೆ ನೀರು ಹರಿಸುವಲ್ಲಿ ನಿಮ್ಮ ಪಾತ್ರವು ಇದೆ ಎಂಬ ಸಂಶಯ ಮೂಡುತ್ತಿದೆ. ನೀವೆ ಅಕ್ರಮವಾಗಿ ನದಿಗೆ ನೀರು ಹರಿಸಲು ಕಾರಣರಾಗಿದ್ದಿರಿ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ.

ಆಶ್ಚರ್ಯ ಎಂದ–ರೆ ಇಷ್ಟೆಲ್ಲಾ ನಮ್ಮ ಹಕ್ಕಿನ ನೀರು ತೆಲಂಗಾಣಕ್ಕೆ ಹರಿದು ಹೋಗುತ್ತಿದ್ದರು ಕೂಡಾ, ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ಶಾಸಕರಾಗಲಿ ಕ್ಷೇತ್ರದಲ್ಲಿದ್ದು, ಒಬ್ಬರು ಕೂಡಾ ನಾರಾಯಣಪುರ ಜಲಾಶಯಕ್ಕೆ ಭೇಟಿ ನೀಡಲೆ ಇಲ್ಲಾ. ನಮ್ಮ ನೀರಾವರಿ ಜಿಲ್ಲೆಯಲ್ಲಿ ಏನಾಗುತ್ತಾ ಇದೆ. ಇದೆನಾ ನಿಮ್ಮ ರೈತರ ಬಗ್ಗೆ ತೋರುವ ಕಾಳಜಿ. ರೈತರ ಪ್ರಶ್ನೆಗಳಿಗೆ ಉತ್ತರ ನೀಡಲಾಗದೆ ನಿಮ್ಮದೆ ಸರಕಾರ ಇದ್ದರೂ ಕೂಡಾ, ಸಿಎಮ್, ಡಿಸಿಎಮ್ ಎಂದು ಏಕಾಂಗಿಯಾಗಿ ಅದು ರೈತರು ಛೀಮಾರಿ ಹಾಕಿದಾಗ ಓಡಾಟ ಶುರು ಮಾಡಿದ್ದು, ಅನ್ನದಾತ ಗಮನಿಸಿದ್ದಾನೆ.

ಜಿಲ್ಲೆಯಲ್ಲಿ ಪ್ರಭಾವಿ ಸಚಿವರಾಗಿ, ಶಾಸಕರು ಇರುವಾಗಲೇ, ರೈತರು ನೀರಿಗಾಗಿ ಎಷ್ಟು ಸಂಕಷ್ಟ ಅನುಭವಿಸಿದರು. ದೇಶದಹೊಟ್ಟೆ ತುಂಬಲೂ ಗೇಟ್ ತೂಬು ಮುರಿಯುವ ಕೃತ್ಯಕ್ಕೆ ರೈತ ಕೈಹಾಕ ಬೇಕಾಯಿತು, ಎಂಬುದನ್ನು ಯೋಚಿಸಿದ್ದಿರಾ. ಕೈಲಾಗದೆ ಮೈಪರಚಿಕೊಂಡ ಎನ್ನುವಂತೆ ರೈತರಿಗೆ ಉತ್ತರಿಸಲಾಗದೆ, ರೈತರು ನಮ್ಮ ಹೋರಾಟ ಬೆಂಬಲಿಸಿದ್ದಕ್ಕೆ ಇಲ್ಲಸಲ್ಲದ ಹೇಳಿಕೆ ನೀಡುತ್ತಿರುವುದು ವಿಷಾದನೀಯ ಎಂದು ಮಾಜಿ ಶಾಸಕ ನರಸಿಂಹನಾಯಕ ರಾಜುಗೌಡ ಹೇಳಿದ್ದಾರೆ.

ಇದನ್ನೆ ಭತ್ತ ಒಣಗಿ ಹೋದ, ಬೆಳೆ ಹಾಳಾದ ರೈತರ ಗ್ರಾಮಗಳ ಜಮೀನಿಗೆ ಭೇಟಿ ನೀಡಿ ಮಾತನಾಡಿ, ಎಲ್ಲೊ ಏಸಿ ರೂಮಲ್ಲಿ ಕುಳಿತು ಮಾತನಾಡೋದು ಅಲ್ಲಾ ಎಂದು ತಿರುಗೇಟು ನೀಡಿದ್ದಾರೆ.

# ಸಪ್ತಗಿರಿ ಕಾಲೇಜಿಗೆ ಶೇ 98.46 ಫಲಿತಾಂಶ







ಮಲ್ಲಮ್ಮನುಡಿವಾರ್ತೆ ಬೀದರ್: ಏ.9:ಇಲ್ಲಿಯ ಶ್ರೀ ವೆಂಕಟೇಶ್ವರ ಶಿಕ್ಷಣ ಸಂಸ್ಥೆಯ ಸಂಚಾಲಿತ ಸಪ್ತಗಿರಿ ಪದವಿಪೂರ್ವ ವಿಜ್ಞಾನ ಕಾಲೇಜಿಗೆ ಪ್ರಸಕ್ತ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 98.46 ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾದ 196 ವಿದ್ಯಾರ್ಥಿಗಳ ಪೈಕಿ 35 ಅಗ್ರಶ್ರೇಣಿ, 138 ಪ್ರಥಮ ದರ್ಜೆ ಹಾಗೂ 20 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೆ–ೕರ್ಗಡೆಯಾಗಿದ್ದಾರೆ.

ವೈಷ್ಣವಿ ಎನ್. ಶೇ 95.16, ಭುವನೇಶ್ವರಿ ಪಿ. ಶೇ 93.33, ನಿಶ್ಚಿತಾ ಎಸ್. ಶೇ 93, ಭಾಗ್ಯಶ್ರೀ ಶೇ 92.33, ದೀಪಿಕಾ ಡಿ. ಶೇ 91.16, ಪೃಥ್ವಿರಾಜ ಕೆ. ಶೇ 91.16, ಅಭಿಷೇಕ ಡಿ. ಶೇ 91, ಐಶ್ವರ್ಯ ಎಸ್. ಶೇ 91, ಶಿವನಂದಾ ಬಿ. ಶೇ 90.16, ಸುದರ್ಶನ ಎಸ್. ಶೇ 90 ರಷ್ಟು ಅಂಕ ಗಳಿಸಿ ಸಾಧನೆ ಮಾಡಿದ್ದಾರೆ.

ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರದಲ್ಲಿ ಅನೇಕ ವಿದ್ಯಾರ್ಥಿಗಳು 100ಕ್ಕೆ 100 ಅಂಕ ಗಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಶ್ರೀನಿವಾಸ್ ಡಿ. ತಾಂದಳೆ, ಕಾರ್ಯದರ್ಶಿ ಗೋಪಾಲ್ ಡಿ. ತಾಂದಳೆ, ಕಾಲೇಜು ಪ್ರಾಚಾರ್ಯ ಗೋವಿಂದ ಡಿ. ತಾಂದಳೆ ಹಾಗೂ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

# ಕಮಲನಗರ ರೈಲು ಸೇವೆಗಳನ್ನುಪುನಾರಂಭಿಸಿ:ದಿಲೀಪ ಮುಧಾಳೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಏ.9: ರೈಲು ನಿಲ್ದಾಣದಿಂದ ಹಾದು ಹೋಗುವ ಎಲ್ಲ ರೈಲುಗಳ ನಿಲುಗಡೆ ಹಾಗೂ ಕೋವಿಡ್ ಸಮಯ ದಲ್ಲಿ ಬಂದ್ ಮಾಡಿರುವ ಎಲ್ಲ ರೈಲು ಸೇವೆಗಳನ್ನುಪುನಾರಂಭಿಸಬೇಕು ಎಂದು ನಾಗರಿಕ ಸೇವಾ ಸಮಿತಿ ಅಧ್ಯಕ್ಷ ದಿಲಿಪ ಮುಧಾಳೆ ಆಗ್ರಹಿಸಿದೆ.

ಕಮಲನಗರರೈಲು ನಿಲ್ದಾಣ–ಕ್ಕೆ ಭೇಟಿ ನೀಡಿದ್ದ ದಕ್ಷಿಣ ಕೇಂದ್ರರೈಲು ಸಿಕಿಂದ್ರಾಬಾದ್ ವಿಭಾಗದ ಪ್ರಧಾನ ವ್ಯವಸ್ಥಾಪಕ ಭರತೇಶ್ ಕುಮಾರ್ ಜೈನ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು,

ಕಮಲನಗರ ಮತ್ತು ಔರಾದ ಎರಡು ತಾಲೂಕು ಸೇರಿ ಪಟ್ಟಣದಲ್ಲಿ ಒಂದೇ ರೈಲು ನಿಲ್ದಾಣ ಇದಾಗಿದ್ದು, ಅತೀ ಹೆಚ್ಚು ಜನರ ಸಂಚಾರವುಳ್ಳ ಮತ್ತು ಅಧಿಕ ಆದಾಯ ಕೊಡುವ ನಿಲ್ದಾಣ ಇದಾಗಿದೆ. ಕಮಲನಗರ ತಾಲೂಕು ಕೇಂದ್ರವಾಗಿ ಐದು ವರ್ಷ ಕಳೆದರೂ ಮೂಲ ಸೌಕರ್ಯಗಳನ್ನು ಒದಗಿಸಲಾಗಿಲ್ಲ ಎಂದು ತಿಳಿಸಿದರು.

ಡಿಎಸ್‌ಎಸ್ ತಾಲೂಕು ಅಧ್ಯಕ್ಷ ಗೋವಿಂದರಾವ್ ತಾಂದಳೆ, ಛತ್ರಪತಿಔರಂಗಾಬಾದ–ಗುಂಟೂರ', ಸಿಕಿಂದ್ರಾಬಾದ್–ಸಾಯಿನಗರ ಶಿರಡಿ, ಕಾಜಿಪೇಟ್–ಹಡಪಸರ, ಶಿವಾಜಿ ಟರ್ಮಿನಲ್ ಮುಂಬೈ–ಬೀದರ ಈ ರೈಲುಗಳು ನಿಲುಗಡೆ ಆಗದಿರುವುದು ತಾಲೂಕು ಜನರಿಗೆ ಬೇಸರ ತಂದಿದೆ. ಈ ರೈಲುಗಳ ನಿಲುಗಡೆ ಜತೆಗೆ ಕೋವಿಡ್ ವೇಳೆ ಬಂದ್ ಮಾಡಿರುವ ಎಲ್ಲ ರೈಲುಗಳನ್ನು ಪುನಾರಂಭಿಸಬೇಕು ಎಂದು ಆಗ್ರಹಿಸಿದರು.

ಮನವಿ ಪತ್ರ ಸ್ವೀಕರಿಸಿದ ಪ್ರಧಾನವ್ಯವಸ್ಥಾಪಕರು ಶೀಘ್ರದಲ್ಲಿ ಕೆಲವು ರೈಲುಗಳ ನಿಲುಗಡೆಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಅಮುಲ್ ಸೂರ್ಯವಂಶಿ, ಕಲ್ಲೇಶ್ ಉದಗಿರೆ, ರವಿ ತಪ್ಪಳೆ, ರಾಜಕುಮಾರ ವಾಲೆ, ಅಜರ – ಬಾಗವಾನ, ಶಬೀರ್ ಕು–ರೇಶಿ ಸೇರಿದಂತೆ ಅನೇಕರು ಇದ್ದರು.

# ಬಿಜೆಪಿ ಆಕ್ರೋಶ ಯಾತ್ರೆಗೆ ಟೀಕೆ



ಬೀದರ್:ಏ.9: ರಾಜ್ಯದಲ್ಲಿ ಬಿಜೆಪಿ ನಡೆಸುತ್ತಿರುವುದು ಜನಾಕ್ರೋಶ ಯಾತ್ರೆಯಲ್ಲ; 'ಬಿಜೆಪಿ ಆಕ್ರೋಶ ಯಾತ್ರೆ' ಎಂದು ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಘಟಕದ ವಕ್ತಾರ ಶಂಕರ ಜ್ಯಾಂತಿಕರ್ ಟೀಕಿಸಿದ್ದಾರೆ.

ಇದು ರಾಜ್ಯದ ಬೆಲೆ ಏರಿಕೆ ವಿರುದ್ಧದ ಜನಾಕ್ರೋಶ ಯಾತ್ರೆ ಆಗಿರದೆ, ಕೇಂದ್ರದ ಬಿಜೆಪಿಯ ಬೆಲೆ ಏರಿಕೆ ವಿರುದ್ಧದ ಜನಾಕ್ರೋಶ ಯಾತ್ರೆಯಾಗಿದೆ ಎಂದು ವ್ಯಂಗ್ಯವಾಡಿದ್ದಾರೆ.

ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಮಾಡುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಲಾಗದ ಬಿಜೆಪಿ ರಾಜ್ಯ ಘಟಕ ಜನರ ದಾರಿ ತಪ್ಪಿಸಲು ಜನಾಕ್ರೋಶ ಯಾತ್ರೆ ನಡೆಸುತ್ತಿದೆ ಎಂದು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ತಮ್ಮ ಕುರ್ಚಿ ಉಳಿಸಿಕೊಳ್ಳಲು ಯಾತ್ರೆ ಹಮ್ಮಿಕೊಂಡಿದ್ದಾರೆಯೇ ಹೊರತು ಬೇರೆ ಯಾವ ಸಾರ್ವಜನಿಕ ಹಿತಾಸಕ್ತಿಯ ಸದುದ್ದೇಶ ಖಂಡಿತ ಈ ಯಾತ್ರೆಗೆ ಇಲ್ಲ ಎಂದು ಹೇಳಿದ್ದಾರೆ.

ರಾಜ್ಯದ ಜನರ ಆಶೀರ್ವಾದ ಕಾಂಗ್ರೆಸ್‌ಗೆ ಇದೆ. ಗ್ಯಾರಂಟಿ ಯೋಜನೆಗಳು ಸೇರಿದಂತೆ ಸರ್ಕಾರದ ಜನಪರ ಕಾರ್ಯಗಳಿಂದ ಜನ ಸಂತುಷ್ಟರಾಗಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ವಿಫಲಗೊಳಿಸಲು ರಾಜ್ಯದ ಬಿಜೆಪಿ ನಾಯಕರು ಕೇಂದ್ರದೊಂದಿಗೆ ಶಾಮೀಲಾಗಿ ರಾಜ್ಯಕ್ಕೆ ನ್ಯಾಯಯುತವಾಗಿ ಸಿಗಬೇಕಾದ ತೆರಿಗೆ ಪಾಲು ಹಾಗೂ ಅನುದಾನಕ್ಕೆ ಕತ್ತರಿ ಹಾಕಿದ್ದಾರೆ ಎಂದು ಆಪಾದಿಸಿದ್ದಾರೆ.

# ಸುಬ್ಬಕ್ಕಳ ಮೈಂಡ್ ಟರ್ನಿಂಗ್ ಸೆಂಟರು

(ಲಲಿತ ಪ್ರಬಂಧ /ಹಾಸ್ಯ )

ರೇಷ್ಮೆ ಸೀರೆ ಉಟ್ಟು ತುಂಬ ಲಕ್ಷಣವಾಗಿ ಕಾಣ್ತಿದ್ದ ಸುಬ್ಬಕ್ಕ ಈಗ ಮೊದಲಿನಂತ್ತಿಲ್ಲ. ಸೀರೆ ಬದಲಾಗಿ ಚೂಡಿದಾರ ಪ್ಯಾಷನ್ ಡ್ರೇಸ್ ತೊಡುತ್ತಿದ್ದಾಳೆ. ನೀಳವಾದ ಅವಳ ಕೂದಲು ಈಗ ಇಂದಿರಾ ಗಾಂಧಿಯಂತೆ ಕಟಿಂಗ್ ಮಾಡಿಕೊಂಡಿದ್ದಾಳೆ. ಮುಖಕ್ಕೆ ಬರಿ ಸ್ನೋ ಪೌಡರ್ ಹಚ್ಚಿಕೊಳ್ತದ್ದ ಆಕೆ ಈಗ ಬ್ಯೂಟಿ ಪಾರ್ಲರ್ ಗೆ ಹೋಗಿ ಮೇಕಪ್ ಮಾಡಿಕೊಳ್ಳುತ್ತಿದ್ದಾಳೆ. ನೀವೇ ಊಹಿಸಿ ನಮ್ಮ ಸುಬ್ಬಕ್ಕಳ ಮೈಂಡು ಎಷ್ಟು ಬೇಗ ಬದಲಾಗಿದೆ ಅಂತ.

ಸರ್ಕಾರಿ ಶಾಲಿ ಮಾಸ್ತರ್ ಆಗಿ ಮಕ್ಕಳಿಗೆ ತುಂಬ ಚನ್ನಾಗಿ ಪಾಠ-ಪ್ರವಚನ ಮಾಡ್ತಿದ್ದ ನಮ್ ಸುಬ್ಬಕ್ಕ ಕೆಲ ದಿನಗಳ ಹಿಂದೆ ಶಾಲೇಲಿ ಪಾಠ ಮಾಡಿ ಮನೆಗೆ ಬಂದ್ ಮೇಲೆ ಆನ್ ಲೈನ್ ನಲ್ಲಿ ಲೈವ್ ಬಂದು ಪ್ರವಚನ ಹೇಳ್ತಿದ್ದಳು.

ಕನ್ನಡ ವ್ಯಾಕರಣದಲ್ಲಿ ಪಾಠ-ಪ್ರವಚನ ಅನ್ನೊದು ಜೋಡು ನುಡಿಯಾಗಿ ಬಳಸುತ್ತಾರೆ. ಆದರೆ ಸುಬ್ಬಕ್ಕ ಪಾಠ ಶಾಲೇಲಿ ಹೇಳಿದರೆ ಪ್ರವಚನ ಮನೆಯಲ್ಲಿ ಹೇಳುವ ಪದ್ದತಿ ಸುರು ಮಾಡಿಕೊಂಡಿದಳು. ಇವಳ ದೃಷ್ಟಿಯಲ್ಲಿ ಪಾಠ ಬೇರೆ ಪ್ರವಚನ ಬೇರೆಯಾಗಿ ಮಾರ್ಪಟ್ಟಿತು.

ಹೌದು ನಿಜವಾಗಿಯೂ ಪ್ರವಚನ-ಪಾಠ ಬೇರೆ ಬೇರೆನೇ.

ಈಗ ಅದೂ ಬಿಟ್ಟು ಸುಬ್ಬಕ್ಕ ' ಮೈಂಡ್ ಮಾಸ್ಟರ್ " ಆಗಿ ಬದಲಾಗಿದ್ದಾಳೆ. ಪ್ರವಚನ ಹೇಳುವ ಸಮಯದಲ್ಲಿ ಜನರಿಗೆ ಕಾಲಕ್ಕೆ ತಕ್ಕಂತೆ ಬದಲಾಗಬೇಕು ಎಂದು ಹೇಳುತ್ತಿದ್ದ ಇವಳು ಜನರು ಬದಲಾಗಿದ್ದಾರೋ ಇಲ್ವೋ ! ಇವಳು ಮಾತ್ರ ತುಂಬಾ ಬದಲಾಗಿದ್ದಾಳೆ.

ರೇಷ್ಮೆ ಸೀರೆ ಉಟ್ಟು ತುಂಬ ಲಕ್ಷಣವಾಗಿ ಕಾಣ್ತಿದ್ದ ಸುಬ್ಬಕ್ಕ ಈಗ ಮೊದಲಿನಂತ್ತಿಲ್ಲ. ಸೀರೆ ಬದಲಾಗಿ ಚೂಡಿದಾರ ಪ್ಯಾಷನ್ ಡ್ರೇಸ್ ತೊಡುತ್ತಿದ್ದಾಳೆ. ನೀಳವಾದ ಅವಳ ಕೂದಲು ಈಗ ಇಂದಿರಾ ಗಾಂದಿಯಂತೆ ಕಟಿಂಗ್ ಮಾಡಿಕೊಂಡಿದ್ದಾಳೆ. ಮುಖಕ್ಕೆ ಬರಿ ಸ್ನೋ ಪೌಡರ್ ಹಚ್ಚಿಕೊಳ್ತದ್ದ ಆಕೆ ಈಗ ಬ್ಯೂಟಿ ಪಾರ್ಲರ್ ಗೆ ಹೋಗಿ ಮೇಕಪ್ ಮಾಡಿಕೊಳ್ಳುತ್ತಿದ್ದಾಳೆ. ನೀವೇ ಊಹಿಸಿ ನಮ್ಮ ಸುಬ್ಬಕ್ಕಳ ಮೈಂಡು ಎಷ್ಟು ಪಾಸ್ಟ್ ಅಗಿ ಬದಲಾಗಿದ್ದಾಳೆ. ಅಂತ .

ಇರಲಿ. ಈಗ ಈಕೆ ಈ ಮೈಂಡ್ ಟ್ರೈನಿಂಗ್ ಸೆಂಟರ್' ಅಂತ ಮಾಡಿರುವುದು ಒಂದು ವಿನೂತನ ಪ್ರಯೋಗವೇ ಸರಿ.

Fmind ಗೆ ಅವಾರ್ಡ ಬರುವ ಮುಂಚೆ ಸುಬ್ಬಕ್ಕ ಹಳ್ಳಿ ಗೌರಮ್ಮನ ಹಾಗೆ ಅರೆಹುಚ್ಚಿಯಾಗಿದ್ದವಳು ಈಗ ಸ್ವಲ್ಪ ಪ್ರಬುದ್ಧಳಾಗಿ ಮಾನಸಿಕವಾಗಿ ಅಷ್ಟೊಂದು ಬದಲಾಗದಿದ್ದರೂ ದೈಹಿಕವಾಗಿ ತುಂಬ ಬದಲಾಗಿದ್ದಾಳೆ.

ಕೆಲ ವರ್ಷಗಳ ಹಿಂದೆ ಅಂ-ದರೆ 2019 ರ ಸಂಧರ್ಭದಲ್ಲಿ ಕೊರನಾ ಮಹಾಮಾರಿ ಕಾರಣವಾಗಿ ಲಾಕ್ ಡೌನ್ ಆಗಿದ್ದರಿಂದ ಆಕೆಗೆ ಮನೆಯಿಂದ ಹೊರ ಬರದೆ ಇದ್ದದ್ದರಿಂದ ಫೇಸ್ ಬುಕ್ ಲೈವ್ ನಲ್ಲಿ ಪ್ರವಚನ ಸುರು ಮಾಡಿ ನೂರಾರು ಪಡ್ಡೆ ಹೈಕಳಿಗೆ ಬುದ್ದಿ ಹೇಳಿದರಿಂದ ಅವರು ಸಾರಾಯಿ ಕುಡಿಯೊದು, ಬೀಡಿ ಸಿಗರೇಟು ಸೇದುವುದು ಮತ್ತು ತಂಬಾಕು ತಿನ್ನುವುದು ಬಿಟ್ಟಿರುವುದಾಗಿ ಇವಳು ಪ್ರವಚನ ಮಾಡುವಾಗ ಲೈವ್ ನಲ್ಲಿ ಕಾಮೆಂಟ್ ಹಾಕಿದ ಹುಡುಗರ ಕುರಿತು ತುಂಬ ಖುಷಿ ಪಟ್ಟಿದಳು. ಕೊನೆಗೂ ತಾನು ಹೇಳುವ ಪ್ರವಚನ ಕೇಳಿ ಚಟಗಳು ಬಿಟ್ಟಿರುವ ವ್ಯಸನಕಾರರ ಕುರಿತು ತುಂಬ ಸಲ ಸಾಕಷ್ಟು ಕಡೆ ಹೇಳಿಕೊಂಡು ಪ್ರಚಾರ ತಗೊಂಡಿದ್ದರಿಂದ ಅದ್ಯಾವುದೋ ಡೆಲ್ಲಿಯ ಖಾಸಗಿ ಸಂಸ್ಥೆಯೊಂದು ಇವಳ ಪ್ರವಚನಕ್ಕೆ ಮನಸೋತು ಪ್ರಶಸ್ತಿ ಪುರಸ್ಕಾರವು ನೀಡಿ ಗೌರವಿಸಿತು. ಅಂದಿನಿಂದ ಈಕೆ

ತನ್ನ ಮಾತಿಗೆ ಜನ ಇಷ್ಟೊಂದು ಫೀದಾ ಅಗ್ತಾರೆ ಅಂದರೆ ನಾನೀಗ ಪ್ರವಚನ ಹೇಳೊದು ಬಿಟ್ ಬಿಟ್ಟು ಮನಶಾಸ್ತ್ರಜ್ಞೆಯಾಗಿ ಯಾಕೆ ಗುರ್ತಿಸಿ ಕೊಳ್ಳಬಾರದು ? ಅಂತ ಯೋಚಿಸಿ ಈ 'ಮೈಂಡ್ ಮಾಸ್ಟರ್ ಟ್ರೇನಿಂಗ್ ಸೆಂಟರ್ ' ಪ್ರಾರಂಭಿಸಿಯೇ ಬಿಟ್ಟಳು.

ಇವಳು ಆವಾಗ ಪ್ರವಚನ ಹೇಳುವ ಸಮಯದಲ್ಲಿ ಕೆಲ ಪಡ್ಡೆ ಹುಡುಗರು ಕಪಿಚೇಷ್ಟೆ ಮಾಡಿದ್ದು ಉಂಟು. ಆದರೂ ಸ್ವಲ್ಪವೂ ಕೋಪಿಸಿಕೊಳ್ಳದೆ ಅಷ್ಟೇ ಸರಾಗವಾಗಿ ಪ್ರವಚನ ಮುಗಿಸುತ್ತಿದಂತೆ ಈ ಅವಾರ್ಡು ಬೇರೆ ಸಿಕ್ಕಿದರಿಂದ ತುಂಬ ಶಾರ್ಪ ಆಗಿದ್ದ ನಮ್ಮ ಸುಬ್ಬಕ್ಕ ಈ ಪ್ರಶಸ್ತಿಯ ಗರಿ ಬಂದೊಡನೆ ಮೈಯಲ್ಲ ಒಂದ್



ನಮೂನೆ ರೊಮಾಂಚನಗೊಂಡು ಆ ನವಿಲಿನಂತೆ ಹುಚ್ಚೆದ್ದು ಆ ಅವಾರ್ಡು ಕೊಡುವ ಸಂಸ್ಥೆಯವರೊಂದಿಗೆ ಡೆಲ್ಲಿ ವೇದಿಕೆಯಲ್ಲಿಯೇ ಕುಣಿದು ಕುಪ್ಪಳಿಸಿ ಅತಿ ಖುಷಿಯಿಂದ ಪ್ರಶಸ್ತಿ ಸ್ವಿಕರಿಸಿದಳು.

ಈ ಮೈಂಡ್ ಮಾಸ್ಟರ್ ಪ್ರಶಸ್ತಿ ಬಂದಾಗಿನಿಂದ ನಮ್ಮ ಸುಬ್ಬಕ್ಕಳ ಮೈಂಡು ಈಗೀಗ ಮೊದಲಿನಂತ್ತಿಲ್ಲ. ಅದು ಏನಾದ್ರೂ ಒಂದಿಲ್ಲೊಂದು 'ನವನವೋನ್ಮೇಷಶಾಲಿನಿ'

ಎನ್ನುವಂತೆ ಹೊಸ ಹೊಸದರ ಬಗ್ಗೆ ಯೋಚಿಸ್ತಾನೆ ಇರುತ್ತದೆ.

ಮನುಷ್ಯನಲ್ಲಿ ಕಾಮ,ಕ್ರೋಧ, ಲೋಭ,ಮೋಹ,ಮದ,ಮತ್ಸರ ',ಹೆಚ್ಚಾದಂತೆ ಅವನ ಮನಸ್ಸು ಚಂಚಲತೆಯಿಂದ ಚಲಿಸಲಾರಂಭಿಸುತ್ತದೆ. ದೇಹಕ್ಕೆ ವಯಸ್ಸಾದರು ಮನಸ್ಸಿಗೆ ವಯಸ್ಸಾಗುವುದಿಲ್ಲ.

ಸಾಯುವ ಸಮಯದಲ್ಲಿಯೂ ಆತನಿಗೆ ಅರಿಷಡ್ ವರ್ಗಗಳು ಮುತ್ತಿಗೆ ಹಾಕಿದರೆ ಅವನಲ್ಲಿ ಯೌವನದ ಆಸೆ ಆಕಾಂಕ್ಷೆಗಳು ಮೂಡುತ್ತವೆ. ಸುಂದರವಾದ ಹೆಣ್ಣೊಂದು ಹತ್ತಿರ ಸುಳಿದು ಅವಳ ಸೌಂದರ್ಯ ತಾಕಿದರೆ ಸಾಕು ನೂರು ವರ್ಷದ ಮುದುಕನಿದ್ದರೂ ಅವಳ ಸ್ಪರ್ಶದ ಸುಖ ಬಯಸಿ ಆತ ಜೊಲ್ಲು ಸುರಿಸುತ್ತಾನೆ " ಅಂತ ಶ್ರೀ ಕೃಷ್ಣ ಭಗವತ್ ಗೀತೆಯಲ್ಲಿ ಹೇಳಿದ್ದಾನೆ.

ಈಗ ಈಕೆಗೆ ಜನಾ 'ಶಾಲಿ ಮಾಸ್ತರತಿ' ಅನ್ನೊದು ಬಿಟ್ಟು 'ಮೈಂಡ್ ಮಾಸ್ಟರ್ ಅನ್ನೊದಕ್ಕೆ ಸುರು ಮಾಡಿದರು. ಇದೇನು ಸರ್ಕಾರದಿಂದ ಪಗಾರ ತಗೊಂಡು ಮಕ್ಕಳಿಗೆ ಪಾಠ ಮಾಡಬೇಕಾದವಳಿಗೆ 'ಮೈಂಡ್ ಮಾಸ್ಟರ್ ' ಅಂತ ಹೇಳ್ತಿದ್ದಿರಿ ಅಂತ ಕೇಳಬೇಡಿ. ಮತ್ತೆ

ಮೈಂಡ್ ಮಾಸ್ಟರ್' ಅಂದರೆ ಏನು ಅಂತ ಕೇಳ್ತಿರಾ ? ಇರಲಿ. ಹೇಳ್ತೆನೆ ಕೇಳಿ mind ಅಂದ್ರೆ ಮನಸ್ಸು Master ಅಂದರೆ ಶಿಕ್ಷಕ ಅಂತ ಅಲ್ವಾ ? ಅಂದರೆ ಇವಳು ಮನಸ್ಸಿನ ಬಗ್ಗೆ ಶಿಕ್ಷಕಿಂ-ಯಾಗಿ ಪಾಠ ಮಾಡ್ತಾಳೆ ಅಂತ ತಾವು ಅಂದುಕೊಂಡಿರಬಹುದು ಇದು ಸುದ್ದ ಸುಳ್ಳು. ಯಾ-ಕೆಂದರೆ ಇವಳು ಮನಃಶಾಸ್ತ್ರ ಅಧ್ಯಯನ ಮಾಡೆ ಇಲ್ಲ.

ಸರ್ಕಾರಿ ನಿಯಮದ ಪ್ರಕಾರ ಮನಃಶಾಸ್ತ್ರ ಅಧ್ಯಯನ ಮಾಡಿದವರು ಮನಸ್ಸಿನ ಬಗ್ಗೆ ಭೋಧನೆ ಮಾಡುತ್ತಾರೆ. ಅವರಿಗೆ ಇಂಗ್ಲೀಷ್ ನಲ್ಲಿ ಟುಟಿಜ ಟಛಿ-ಣಜಡಿ ಅಂತ ಕರೆಯಬಹುದು. ಆದ್ರೆ ಈ ಸುಬ್ಬಕ್ಕಳಿಗೆ ಅದೇನೋ ಗೌರವಾರ್ಥವಾಗಿ ಮೈಂಡ್ ಮಾಸ್ಟರ್ ಪ್ರಶಸ್ತಿ ಬಂದಾಗಿನಿಂದ ಅವಳು ಮನಶಾಸ್ತ್ರ ಶಿಕ್ಷಕಿಯಾಗಿ ಬಿಟ್ಟಳು.

(ಒಂದು ಮಾತು ನೆನಪಿರಲಿ ಗೌರವ ಡಾಕ್ಟರೇಟ್ ಪದವಿ ಪಡೆದವರೆಲ್ಲ ಪ್ರೊಪೇಸರ್ ಆಗೊದಿಲ್ಲ.) ಮತ್ತೆ

ಈಕೆ Mind Master trending center' ಅಂತ ಬೋರ್ಡ್ ಹಾಕಿ ಮನಸ್ಸಿನ ಬಗ್ಗೆ ಮನಬಂದಂತೆ ಹೇಳಲು ಸುರು ಮಾಡಿದಳು.

Fmind ಗೆ ಅವಾರ್ಡ ಬರುವ ಮುಂಚೆ ಸುಬ್ಬಕ್ಕ ಹಳ್ಳಿ ಗೌರಮ್ಮನ ಹಾಗೆ ಅರೆಹುಚ್ಚಿಯಾಗಿದ್ದವಳು ಈಗ ಸ್ವಲ್ಪ ಪ್ರಬುದ್ಧಳಾಗಿ ಮಾನಸಿಕವಾಗಿ ಅಷ್ಟೊಂದು ಬದಲಾಗದಿದ್ದರೂ ದೈಹಿಕವಾಗಿ ತುಂಬ ಬದಲಾಗ ತೊಡಗಿದಳು.

ಯಾರ ಮನಸ್ಸು ಯಾರ ಹತ್ತಿರ ಇದೆ ಯಾರಿಗೆ ತಾನೆ ಗೊತ್ತು ? " ಅಂತ ಹೇಳಿದರೆ ಪಡ್ಡೆ ಹೈಕಳು ಸುಬ್ಬಕ್ಕಳ ಮೈಂಡ್ ನಲ್ಲಿ ಸೆಟ್ ಆಗಿದೆ ಅಂತಾರೆ ಎನ ಮಾಡಬೇಕು. ತಿಳಿತಾ ಇಲ್ಲ.

ಕನ್ನಡ ಟೀಚರ್ ಆಗಿ ಹಳ್ಳಿ ಗಮಾರನಂತೆ ಇರುತ್ತಿದ್ದ ಇವಳು ಈಗ ತನ್ನ ದೈಹಿಕ ಬದಲಾವಣೆಯಿಂದ ಖಾಸಗಿ ಕಾನ್ವೆಂಟ್ ಶಾಲೆಯ English Teacher ತರಹ ಬದಲಾಗಿ ಬಿಟ್ಟಿದಳು. ಇವಳ ರೂಪ ಲಾವಣ್ಯ ಆ ಹಳ್ಳಿ ಹೈಕಳಿಗೆ ಮತ್ತೆ ಮತ್ತೆ ಆಕರ್ಷಿತಳಾಗಿ ಕಂಡು ಬರುತ್ತಿದ್ದಳು. ಇವಳು ಹಾಕಿದ ಆ Mind treining Center' ಎಂಬ ಬೋರ್ಡು ಓದಿದ ಜನ ಅವರ ಮೈಂಡ್ ಟ್ರನಿಂಗ್ ಮಾಡಿಕೊಂಡು ಇವಳ ಕ್ಲಾಸ್ ಕೇಳಲು ಬರತೊಡಗಿದರು.

Mind ಅಂದ್ರೆ 'ಮನಸ್ಸು' ಈ ಮನಸ್ಸಿನ ಬಗ್ಗೆ ಆದಿ ಅನಾದಿ ಕಾಲದಿಂದಲೂ ಮಹಾನ್ ಪುರುಷರು ಸಾಕಷ್ಟು ತತ್ವ ಸಿದ್ಧಾಂತಗಳನ್ನು ಹೇಳುತ್ತಾ ಬಂದಿದ್ದಾರೆ. ಆದರೆ ಯಾರಿಗೂ ಈ ಮನಸ್ಸಿನ ಆಳ ಅಗಲ ನಿಲುಕಿಲ್ಲ.

ಭಗವತ್ ಗೀತೆಯಲ್ಲಿ ಶ್ರೀ ಕೃಷ್ಣ ಈ ಮನಸ್ಸಿನ ಬಗ್ಗೆ ಅರ್ಜುನನಿಗೆ ಪರಿ ಪರಿಯಾಗಿ ಹೇಳುತ್ತಾನೆ. "ದೇಹಕ್ಕೆ ಸಾವಿದೆ ಮನಸ್ಸಿಗೆ ಸಾವಿಲ್ಲ." ಮನಸ್ಸು ಅನ್ನೊದು ಸಪ್ತ ಕುದುರೆಗಳಿಗೆ ಹೊಲಿಸಿದ್ದಾನೆ.

"ಕಡಿವಾಣ ಇಲ್ಲದ ಕುದುರೆಯ ಮೇಲೇರಿ ಕುಳಿತರೆ ಆ ಕುದುರೆಯೂ ಮೇಲೆ ಕುಳಿತ ಆ ಸವಾರನಿಗೆ ಎಲ್ಲಿಗೆ ಬೇಕಾದರೂ ಅದು ಕ-ರೆದುಕೊಂಡು ಒಯ್ಯಬಹುದು. ಅಥವಾ ಆತನಿಗೆ ತಗ್ಗಿನಲ್ಲಿಯಾದರು ಬಿಳಿಸಬಹುದು. ಹಾಗೆಯೇ ಮನಸ್ಸಿನ ನಿಗ್ರಹ ಮಾಡದೆ ಹೋದರೆ ನಾವು ಹಾಳಾಗುತ್ತೆವೆ. ಮನಸ್ಸು ಹೇಳಿದಂತೆ ನಾವು ಕೇಳಬಾರದು .ನಾವು ಹೇಳಿದಂತೆ ಮನಸ್ಸು ಕೇಳಬೇಕು .ಅಂದರೆ ಬುದ್ದಿಯ ಹಿಡಿತದಿಂದ ಚಂಚಲ ಮನಸ್ಸನ್ನು ನಿಗ್ರಹಿಸಬೇಕು. ಅದಕ್ಕೆ ದೇಹವೆಂಬ ರಥಕ್ಕೆ ಮನಸ್ಸೆಂಬ ಕುದುರೆಯನ್ನು ಕಟ್ಟಿ, ಆತ್ಮವೆಂಬ ಸಾರಥಿಯಿಂದ ಬುದ್ದಿಯೆಂಬ ಕಡಿವಾಣ ಹಾಕಿ ಆ ಚಂಚಲ ಮನಸ್ಸನ್ನು ನಿಗ್ರಹ ಮಾಡಬೇಕು " ಅಂತ ಶ್ರೀ ಕೃಷ್ಣ ಅರ್ಜುನನಿಗೆ ತುಂಬ ಸಾರಿ ಹೇಳಿದ್ದಾನೆ.

ಮನುಷ್ಯನಲ್ಲಿ ಕಾಮ,ಕ್ರೋಧ, ಲೋಭ,ಮೋಹ,ಮದ, ಮತ್ಸರ,ಹೆಚ್ಚಾದಂತೆ ಅವನ ಮನಸ್ಸು ಚಂಚಲತೆಯಿಂದ ಚಲಿಸಲಾರಂಭಿಸುತ್ತದೆ. ದೇಹಕ್ಕೆ ವಯಸ್ಸಾದರು ಮನಸ್ಸಿಗೆ ವಯಸ್ಸಾಗುವುದಿಲ್ಲ. ಸಾಯುವ ಸಮಯದಲ್ಲಿಯೂ ಆತನಿಗೆ ಅರಿಷಡ್ ವರ್ಗಗಳು ಮುತ್ತಿಗೆ ಹಾಕಿದರೆ ಅವನಲ್ಲಿ ಯೌವನದ ಆಸೆ ಆಕಾಂಕ್ಷೆಗಳು ಮೂಡುತ್ತವೆ. ಸುಂದರವಾದ ಹೆಣ್ಣೊಂದು ಹತ್ತಿರ ಸುಳಿದು ಅವಳ ಸೌಂದರ್ಯ ತಾಕಿದರೆ ಸಾಕು ನೂರು ವರ್ಷದ ಮುದುಕನಿದ್ದರೂ ಅವಳ ಸ್ಪರ್ಶದ ಸುಖ ಬಯಸಿ ಆತ ಜೊಲ್ಲು ಸುರಿಸುತ್ತಾನೆ " ಅಂತ ಶ್ರೀ ಕೃಷ್ಣ ಮತ್ತೊಂದೆಡೆ ಹೇಳಿದ್ದಾನೆ. ಜೀವನದಲ್ಲಿ ವೈರಾಗ್ಯ ತಾಳಿದರೆ ಮಾತ್ರ ಮನಸ್ಸನ್ನು ನಿಗ್ರಹ ಮಾಡಲು ಸಾಧ್ಯ.

ಸುಬ್ಬಕ್ಕ ಸರ್ಕಾರಿ ಶಾಲಾ ಶಿಕ್ಷಕಿಯಾಗಿದ್ದು ಈಗಾಗಲೇ ನಾಕಾರು ವರ್ಷ ಫೇಸ್ ಬುಕ್ ಲೈವ್ ನಲ್ಲಿ ಪ್ರವಚನ ಹೇಳಿದಳು. ಈಗ ಈ mind training ಅಂತ ಬೇರೆ ಸುರು ಮಾಡಿದ್ದಾಳೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಕ್ಕಳಿಗೆ ಅನಧಿಕೃತ ಕೊಚಿ-ಂಗ್ ಸೆಂಟರ್ ನಡೆಸುವವರ ವಿರುದ್ಧ ಈಗಾಗಲೇ ಕೆಲವು ಕಡೆ ಕಡಿವಾಣ ಹಾಕಿದ್ದಾರೆ. ಆದರೆ ಈ ಸುಬ್ಬಕ್ಕಳ Mind Train-ingಗೆ ಯಾರು ಇಲಾಖೆಯಲ್ಲಿ ಕೇಳೋದಿಲ್ವೇ ?

ವೈರಾಗ್ಯ ಎಂದರೆ ಕಾಮ,ಕ್ರೋದ,ಮೋಹ,ಲೋಭ,ಮದ,ಮತ್ಸರಗಳಿಂದ ದೂರ ಉಳಿದು ಸನ್ಯಾಸವನ್ನು ಸ್ವಿಕರಿಸುವುದೇ ಆಗಿದೆ.

ಈ ಸನ್ಯಾಸವನ್ನು ಸ್ವಿಕರಿಸಿದ ವಿಶ್ವ ಮಿತ್ರನು ದೇವಲೋಕದ ಅಪ್ಸರೆ ಮಿನಾಕೆಯಿಂದ ಚಂಚಲಿತನಾಗಿ ಮನ ನಿಗ್ರಹ ಮಾಡದೇ ಹೆಣ್ಣಿಂದ ಹಾಳಾಗಲಿಲ್ಲವೇ? ರಾಮಾಯಣದಲ್ಲಿ ರಾವಣ, ಮಹಾಭಾರತದಲ್ಲಿ ದುಶಾಸನ,ಮೊದಲಾದವರು ಹೆಣ್ಣಿಂದ ಹಾಳಾಗಲಿಲ್ಲವೇ ? ಅಷ್ಟೇಯಲ್ಲದೆ ಇತ್ತಿಚೀನ ಚಿತ್ರದುರ್ಗದ ಸ್ವಾಮಿ ಮತ್ತು ಬಿಡದಿಯ ಸ್ವಾಮಿಗಳು ಸನ್ಯಾಸವನ್ನು ತೊಟ್ಟರು ಏನಾಗಿ ಹೋದರು ? ಅನ್ನೊದು ಗೊತ್ತೆ ಇದೆ ಅಲ್ವಾ ?

ಕನ್ನಡದಲ್ಲಿ 'ಮನಸ್ಸು ಮರ್ಕಟ' ಎಂಬ ಗಾದೆ ಮಾತೊಂದಿದೆ. ಮನಶಾಸ್ತ್ರಜ್ಞದಲ್ಲಿ ಮನಸ್ಸಿಗೆ ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. (ಲುಪ್ತ ಮನಸ್ಸು, ಬಾಹ್ಯ ಮನಸ್ಸು, ಆಂತರಿಕ ಮನಸ್ಸು,)

"ಯಾರ ಮನಸ್ಸು ಯಾರ ಹತ್ತಿರ ಇದೆ ಯಾರಿಗೆ ತಾನೆ ಗೊತ್ತು ? " ಅಂತ ಹೇಳಿದರೆ ಪಡ್ಡೆ ಹೈಕಳು ಸುಬ್ಬಕ್ಕಳ ಮೈಂಡ್ ನಲ್ಲಿ ಸೆಟ್ ಆಗಿದೆ ಅಂತಾರೆ ಎನ ಮಾಡಬೇಕು. ತಿಳಿತಾ ಇಲ್ಲ.

ಸುಬ್ಬಕ್ಕ ಸರ್ಕಾರಿ ಶಾಲಾ ಶಿಕ್ಷಕಿಯಾಗಿದ್ದು ಈಗಾಗಲೇ ನಾಕಾರು ವರ್ಷ ಫೇಸ್ ಬುಕ್ ಲೈವ್ ನಲ್ಲಿ ಪ್ರವಚನ ಹೇಳಿದಳು. ಈಗ ಈ mind training ಅಂತ ಬೇರೆ ಸುರು ಮಾಡಿದ್ದಾಳೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಕ್ಕಳಿಗೆ ಅನಧಿಕೃತ ಕೊಚ್ಚಿಂಗ್ ಸೆಂಟರ್ ನಡೆಸುವವರ ವಿರುದ್ಧ ಈಗಾಗಲೇ ಕೆಲವು ಕಡೆ ಕಡಿವಾಣ ಹಾಕಿದ್ದಾರೆ. ಆದರೆ ಈ ಸುಬ್ಬಕ್ಕಳ ಒಟಿಜ Trainingಗೆ ಯಾರು ಇಲಾಖೆಯಲ್ಲಿ ಕೇಳೋದಿಲ್ವೇ ? ಅಂತ ಒಂದೆಡೆ ಅವಳ ವಿರೋಧಿ ಬಣ ಜಾಗೃತರಾಗಿ ಹೋರಾಟಕ್ಕೆ ಇಳಿಯಲು ಬಹುದು.

ಸರ್ಕಾರಿ ಸೇವಾ ನಿಯಮದ ಪ್ರಕಾರ ಸರ್ಕಾರಿ ನೌಕರರು ಇಲಾಖೆಯ ಅನುಮತಿ ಇಲ್ಲದೇ ಇವೆಲ್ಲ ಮಾಡೊದು ತಪ್ಪು.

"ಏನು ! ನಮ್ಮ ಸುಬ್ಬಕ್ಕ ಪ್ರವಚನ ಹೇಳೊದು ಮತ್ತ ಮೈಂಡ್ ಟ್ರೇನಿಂಗ್ ಕೋಡೊದೆ ತಪ್ಪು ಅಂತಿರಾ ? ಆ ಇನ್ನೊಂದು ಕಾಲೇಜಿನಾಗ ಅಕ್ಕ ಇಲ್ವೇನು ? ಅವಳು ಒಂದು ಮಠಕ್ಕೆ ಪೀಠಾಧ್ಯ-ಕ್ಷೇ ಅಂತೆ ಕಾಲೇಜಿನಲ್ಲಿ ಪಾಠ ಮಾಡೊದು ಬಿಟ್ಟು ತಾಲೂಕು ಒಂದರಲ್ಲಿ ಶರಣರ ಪೀಠಕ್ಕೆ ಅಧ್ಯಕ್ಷ ಆಗಿಲ್ವಾ ? ಮತ್ತೊಬ್ಬ ಶಾಲಿ ಮಾಸ್ತರ್ ಚೀಟಿ ಚಪಾಟಿ ಅಂತ ಭವಿಷ್ಯ ಹೇಳ್ತಾ ಜನರಿಗೆ ಮೋಸ ಮಾಡ್ತಿದ್ದಾರೆ"

ಅಂತ ಸುಬ್ಬಕ್ಕಳ ಕಡೆಯವರು ವಾದ ಮಾಡುವವರಿದ್ದಾರೆ.

ಇರಲಿ.ನಾನು ಏನೋ ! ಹೇಳೊದು ಬಿಟ್ಟು ಇಲ್ಲಿ ಏನೇನೋ ! ಹೇಳಲು ಸುರು ಮಾಡಿದ್ದೇನೆ.

ಮನಸ್ಸು ತನ್ನ ಹಿಡಿತದಲ್ಲಿರಬೇಕಾದರೆ.

'ಕಚ್ಚೆ ಕೈ ಬಾಯಿಗಳು
ಇಚ್ಚೆಯಲ್ಲಿ ಇದ್ದಿಹರೆ
ಅಚ್ಚುತನಪ್ಪ ಅಜನಪ್ಪ
ಲೋಕದಲ್ಲಿ ನಿಶ್ಚಿಂತನಪ್ಪ
ಸರ್ವಜ್ಞ " ಅಂತ ಸರ್ವಜ್ಞ ಕವಿ ಹೇಳಿದ್ದಾನೆ. ಅಷ್ಟೇಯಲ್ಲದೆ ಆತ ಮುಂದುವರೆದು

"ಕಣ್ಣಿಂದಲೇ ಪುಣ್ಯ
ಕಣ್ಣಿಂದಲೇ ಪಾಪ !
ಕಣ್ಣಿಂದಿಹುದು ಇಹಕ್ಕೂ ಪರಕ್ಕೂ
ಕಣ್ಣೇ ಕಾರಣವು ಸರ್ವಜ್ಞ "
ಅಂತ ಹೇಳಿದ್ದಾನೆ.

ಹೀಗೆ ಮಾನವ ಪಂಚೇಂದ್ರಿಯಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡರು 'ಮನಸ್ಸು' ಇದೆಯಲ್ಲ ಅದು ಒಮ್ಮೊಮ್ಮೆ ಸುತಾರಾಂ ಕೇಳುವುದು. ಅದು ಎಲ್ಲೇಲ್ಲೋ ! ಓಡಾಡುತ್ತದೆ. ಮನಸ್ಸು ಹೇಳಿದಂತೆ ಕೇಳಬಾರದು .ನಾವು (ಆತ್ಮ) ಹೇಳಿದಂತೆ ಮನಸ್ಸು ಕೇಳಬೇಕು. ಮನಸ್ಸಿನ ಗುಲಾಮನಾಗುವುದು ಬೇಡ. ಆತ್ಮದ ಆಧಿನದಲ್ಲಿ ಮನಸ್ಸು ಇರಬೇಕು ಅಂದಾಗ ಮಾತ್ರ mind ಸ್ಥಿರವಾಗಿ ಇರುತ್ತದೆ. ಇದಕ್ಕೆಲ್ಲ ಟ್ರೈನಿಂಗ್ ಬೇಕಾಗಿಲ್ಲ. ಸ್ವಯಂ ಆತ್ಮ ಸಿದ್ದಿ ಮಾಡಿಕೊಳ್ಳಬೇಕಾಗಿದೆ.

" ಸ್ವಯಂ ಪ್ರಕಾಶಿತನಾಗು" ಅಂತ ಬುದ್ಧ ಹೇಳಿದ್ದಾನೆ. 'ಅರಿವೇ ಗುರು' ಅಂತ ಅಣ್ಣ ಬಸವಣ್ಣ ಹೇಳಿದ್ದಾನೆ.

"ತನ್ನ ತಾನು ಅರಿತ ಮೇಲೆ
ಇನ್ನೇನ್ , ಇನ್ನೇನೋ ! "
ಅಂತ ಕಡಕೋಳ ಮಡಿವಾಳಪ್ಪನವರು ಹೇಳಿರುವಾಗ ಈ ಪೆದ್ದ ಮುಂಡೆ ಸುಬ್ಬಕ್ಕಳಿಗೆ ಅರಿವಾಗಬಾರದೆ ? ಶಾಲೆಲಿ ಪಾಠ ಮಾಡಿದಷ್ಟು ಸರಳ ಅಲ್ಲ mind ಕಂಟ್ರೋಲ್ ಮಾಡೊದು. ಅದು ಮನಸ್ಸಿನ ಆಳದಿಂದ ಬರಬೇಕು.

ಯಾರಾದರು ಹೇಳಿ ಕಲಿಸಿದರಿಂದ ಮನಸ್ಸು ಅಷ್ಟು ಸಲೀಸಾಗಿ ಕಲಿಯುವುದಿಲ್ಲ.

ಮನಸ್ಸು ಯಾವಾಗ ಹೇಗೆ ಇರುತ್ತದೋ ! ಯಾರಿಗೆ ತಾನೆ ಗೊತ್ತು ? ಸುಖ-ದುಃಖ,ಆವೇಶ, ಕ್ರೋಧ,ಮೋಹ ಮೊದಲಾದ ಸನ್ನಿವೇಶದಲ್ಲಿ ಮನಸ್ಸಿನ ಭಾವನೆಗಳು ಬದಲಾಗುತ್ತಿರುತ್ತವೆ. ಜೀವನದ ಘಟ್ಟಗಳಲ್ಲಿಯೂ ಆ ಮನಸ್ಸು ಬದಲಾವಣೆಗೆ ಒಳಗೊಂಡಿರುತ್ತದೆ ಅನ್ನೊದು ತಿಳಿಯದ ಸುಬ್ಬಕ್ಕ ಮನಸ್ಸಿನ ಬಗ್ಗೆ ಅರೇ - ಬರೇ ತಿಳಿದು ಕೊಂಡು ಮೈಂಡ್ ಮಾಸ್ಟರ್ ಅಂತ ಹೇಳಿ ಮನಶಾಸ್ತ್ರಜ್ಞರಿಗೆ ' ಚಾಲೆಂಜ್ ' ಎನ್ನುವಂತೆ ಒಂದು ಕೋಣೆಯಲ್ಲಿ ಟ್ರೇನಿಂಗ್ ಅಂತ ಕೊಡ್ತಿದ್ದಾಳೆ ಅಂದಮ್ಯಾಲೆ ಇಷ್ಟು ಮಾತ್ರ ಖರೆ.

ಸುಬ್ಬಕ್ಕಳ ರೂಪ ಯೌವನ ನೋಡಿದ ಯಾವನೇ ಹಲ್ಕನನ್ ಮಗಾ ಆದ್ರೂ ಅವಳ ಮೈಂಡ್ ಟ್ರೈನಿಂಗ್ ಸೆಂಟರ್ ಗೆ ಬಂದರೆ ಅವನ ಮೈಂಡ್ ಟರ್ನಿಂಗ್ (ತಿರುವು) ಆಗೊದಂತು ಗ್ಯಾರಂಟಿ.

**- ಮಚ್ಚೇಂದ್ರ ಪಿ ಅಣಕಲ್.**

---


### ಶಿಕ್ಷಣದ ಹೆಸರಲ್ಲಿ ಹಣ ವಸುಲಿಗಿಳಿದ್ರಾ ಶಿಬಿರ ಕೇಂದ್ರಗಳು

## ಬೇಸಿಗೆ ರಜೆಯಲ್ಲಿ ಅಕ್ರಮ ಕೋಚಿಂಗ್ ಗಳಿಗಿಲ್ಲ ಕಡಿವಾಣ! ಸಂಬಂಧ ಪಟ್ಟ ಅಧಿಕಾರಿಗಳು ಇದಕ್ಕೆ ಕೈ ಜೋಡಿಸುವರಾ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲೆಯ ಸುರಪುರ, ಹುಣಸಗಿ ತಾಲೂಕಿನಾದ್ಯಂತ ನಡೆತ್ತಿರುವ ಅಕ್ರಮ ಕೋಚಿಂಗ್ ಸೆಂಟರ್(ತರಬೇತಿ ಶಿಬಿರ) ಹಾವಳಿ ಜೋರಾಗಿದ್ದು,ನಾಯಿ ಕೊಡೆಯಂತೆ ತಲೆ ಎತ್ತಿದ್ದು. ಅಕ್ರಮ ಅಕ್ರಮ ಕೋಚಿಂಗ್ ಸೆಂಟರ್ (ತರಬೇತಿ ಶಿಬಿರ) ಗಳಿಗೆ ಕಡಿವಾಣ ಹಾಕಲು ಶಿಕ್ಷಣ ಇಲಾಖೆ ವಿಫಲವಾಗಿ ಗಾಡ ನಿದ್ರೆಗೆ ಜಾರಿದೆ ಎಂದು ಸಾಮಾಜಿಕ ಹೋರಾಟಗಾರ ಸಚಿನ್ ಕುಮಾರ್ ನಾಯಕ್ ಸುರಪುರ ಆರೋಪಿಸಿದ್ದಾರೆ

ವರ್ಷವಿಡಿ ಶಾಲೆಯಲ್ಲಿ ಕಾಲ ಕಳೆಯುವ ಮಕ್ಕಳು ಬೇಸಿಗೆಯ ರಜಾ ದಿನಗಳಲ್ಲಿ ಆಟವಾಡಲು. ಪಾಲಕರ ಹಾಗೂ ಸಂಬಂಧಿಕರ ಜೊತೆಗೆ ಸಮಯ ಕಳೆದರೆ ಮಾನಸಿಕ ಒತ್ತಡ ಕಡಿಮೆಯಾಗಿ ಮಕ್ಕಳ ಬೌದ್ಧಿಕ ಮಟ್ಟ ಹೆಚ್ಚಾಗುತ್ತದೆ ಹಾಗೂ ಬೇಸಿಗೆ ಇರುವುದರಿಂದ ಬಿಸಿಲಿನಿಂದ ರಕ್ಷಣೆ ನೀಡಿ ಮಕ್ಕಳಿಗೆ ಸಮಸ್ಯೆ ಆಗದಿರಲಿ ಹೀಗೆ ಅರ್ಥ ಅಂಶಗಳನ್ನು ಇಟ್ಟು ಮನೋವಿಜ್ಞಾನಿಗಳು ಮತ್ತು ಸರ್ಕಾರ ಅಭಿಪ್ರಾಯ ಪಟ್ಟು ಬೇಸಿಗೆಯಲ್ಲಿ ರಜೆ



> ಅಕ್ರಮ ನಡೆಸುವ ಕೋಚಿಂಗ್ ಶಿಬಿರಗಳ ವಿರುದ್ಧ ಹಲವಾರು ಸಂಘಟನೆಗಳು ಅನೇಕ ಬಾರಿ ಹೋರಾಟ ಮಾಡಿದರು, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಆಯುಕ್ತರ ಆದೇಶವನ್ನು ಲೇಕ್ಕಿಸದೆ ಇರಬೇಕಾದರೆ ಇವರಿಂದಿಗೆ ಅಧಿಕಾರಿಗಳು ಶಾಮಿಲಾಗಿರುವದು ಮೇಲ್ನೋಟಕ್ಕೆ ಕಂಡು ಬರುತ್ತದೆ.
>
> **-ಸಚಿನ್ ಕುಮಾರ್ ನಾಯಕ ಸಾಮಾಜಿಕ ಕಾರ್ಯಕರ್ತ ಸುರಪುರ್**

> ನಾಳೆನೆ ಸುರಪುರ ಮತ್ತು ಹುಣಸಗಿ ತಾಲೂಕಿನಲ್ಲಿ ನಡೆಸುತ್ತಿರುವಂತ ಅಕ್ರಮ ಕೋಚಿಂಗ್ ಶಿಬಿರಗಳ ಶಾಲೆಗಳಿಗೆ ಭೇಟಿ ನೀಡು ತ್ತೇನೆ ತಾಲೂಕಿನ ಸಿಆರ್ ಸಿ ಅವರ ಮೂಲಕ ಮಾಹಿತಿ ಪಡೆದು ಪರಿಶೀಲನೆ ಮಾಡಿ ಒಂದು ವೇಳೆ ಅಂತ ಅಕ್ರಮ ಕೋಚಿಂಗ್ ಶಾಲೆಗಳಿಗೆ ನೋಟಿಸ್ ನೀಡಿ ವರದಿ ಆಧರಿಸಿ ಡಿಡಿಪಿಐ ಅವರಿಗೆ ಸಲ್ಲಿಸುತ್ತೇವೆ
>
> **-ಹೆಚ್.ಹೆಚ್.ಸತೀಶ ಕ್ಷೇತ್ರ ಶಿಕ್ಷಣ ಅಧಿಕಾರಿಗಳು ಸುರಪುರ**

ನೀಡಿರುತ್ತಾರೆ ಆದರೆ ಬೇಸಿಗೆ ತರಬೇತಿ ಶಿಬಿರ ಗಳ ಹೆಸರಲ್ಲಿ ಕೋಚಿಂಗ್ ಸೆಂಟರ್ ಗಳು ಹಣ ವಸುಲಿಗಿಳಿದಿವೆ ಇದು ಮಕ್ಕಳ ಹಕ್ಕನ್ನು ಬಸಿದುಕೊಳ್ಳುವ ಉನ್ನಾರವಾಗಿದೆ ಎಂದು ಸಾಮಾಜಿಕ ಹೋರಾಟ ಸಚಿನ್ ನಾಯಕ ಸುರಪುರ ಆರೋಪಿಸಿದ್ದಾರೆ

ಆಯುಕ್ತರ ಆದೇಶ ಇದ್ದರು ಶಿಕ್ಷಣ ಇಲಾಖೆ ಕಣ್ಣು ಮುಚ್ಚಿ ಕುಳಿತ್ತಿರುವದು ಖಂಡನೀಯವಾಗಿದೆ ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಅಕ್ರಮ ತಡೆದು ಇಂತಹ ಅಕ್ರಮ ನಡೆಸುತ್ತಿರುವವರ ಮೇಲೆ ಕೇಸ್ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

---

ಏ.12ರಂದು ಡಾ.ಬಿ.ಆರ್,ಅಂಬೇಡ್ಕರ ಸ್ವಾಭಿಮಾನಿ ಬಳಗದಿಂದ

## ಕವಿಗೋಷ್ಠಿ 80ಕ್ಕೂ ಹೆಚ್ಚು ಕವಿಗಳು ಭಾಗಿ-ವೀರೇಶ ಕೊಂಕಲ್



ಶಹಾಪುರ: ಭಾರತ ರತ್ನ ಡಾ, ಬಾಬಾಸಾಹೇಬ್ ಅಂಬೇಡ್ಕರವರ 134 ನೆಯ ಜಯಂತಿ ಅಂಗವಾಗಿ ಯಾದಗಿರಿ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಡಾ,ಬಿ,ಆರ್ ಅಂಬೇಡ್ಕರ ಸ್ವಾಭಿಮಾನಿ ಬಳಗದ ಆಶ್ರೆಯದಲ್ಲಿ ಕವಿಗೋಷ್ಟಿ ಏ,12ರಂದು ನಗರದ ವೈಷ್ಣವಿ ಪಂಕ್ಷನ ಹಾಲ್ ನಲ್ಲಿ ಎರ್ಪಡಿಸಲಾಗಿದೆ,ಸುಮಾರು 80ಕ್ಕೂ ಅಧಿಕ ಕವಿಗಳು ಪಾಲ್ಗೊಳ್ಳಲ್ಲಿದ್ದು ಡಾ,ಬಾಬಾಸಾಹೇಬರ ಚಿಂತನೆಗಳನ್ನು ಸಾಹಿತ್ಯ ಕ್ಷೇತ್ರದ ಮುಖಾಂತರ ಜನಸಮಾನ್ಯರಿಗೆ ಅರ್ಥೈಹಿಸಲು ಪ್ರಯತ್ನ ಮಾಡಲಾಗಿದೆ,ಎಂದು ಅಭಿಮಾನಿ ಬಳಗದ ವೀರೇಶ ಕೊಂಕಲ್ ಡಾ, ಮರೆಪ್ಪ ಪರಮೇಶ್ವರ ಸೋಪಿಸಾಬ್ ಮಡಿವಾಳಪ್ಪ ಹೆಗ್ಗನದೊಡ್ಡಿ, ಚೆನ್ನಪ್ಪ ಬಾಗಲಿ. ಶುಭಾಶ ಹೋತಪೇಟ ಶಾಂತಪ್ಪ ಸಾಲಿಮನಿ ಜಂಟಿಯಾಗಿ ತಿಳಿಸಿದರು, ಈ ಸಮಯದಲ್ಲಿ ಮಾತನಾಡಿದ ವೀರೇಶರವರು ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕೇವಲ ಜಯಂತಿಗೆ ಸೀಮಿತಗೊಂಡರೆ ಸಾಲದು ಡಾ,ಅಂಬೇಡ್ಕರವರ ಜೀವನ ಮತ್ತು ಆದರ್ಶಗಳುಗಳು ಪ್ರತಿ ಮನೆ ಮನೆಯ ಮಕ್ಕಳ ಹಾಡು ಬಾಷೆಯಲ್ಲಿ ಮೂಡುವಂತಾಗಬೆಕು, ಅಲ್ಲದೆ ಸಂವಿಧಾನವನ್ನು ಓದುವದು ನಮ್ಮೆಲ್ಲರ ಕರ್ತವ್ಯವೆಂದು ಅರಿತುಕೊಳ್ಳಬೇಕು ಈ ದಿಸೆಯಲ್ಲಿ ಸಾಹಿತ್ಯ ಕವನಗಳ ಮುಖಾಂತರ ಡಾ,ಬಾಬಾಸಾಹೇಬರ ವಿಚಾರಗಳು ಇಂದಿನ ಯುವ ಪೀಳಿಗೆಗೆ ಪೂರ್ತಿಯಾಗಿಸಲು ಈ ವಿನೂತನ ಕಾರ್ಯಕ್ರಮದತ್ತ ಹೆಜ್ಜೆ ಹಾಕಲಾಗುತ್ತಿದೆ, ಅಂದಿನ ಕವಿಗೋಷ್ಠಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕವಿಗಳು ಆಗಮಿಸಿದರೂ ಅವಕಾಶ ಕಲ್ಪಿಸಿಕೊಡಲಾಗುತ್ತದೆ ಎಂದರು, ಸೋಪಿಸಾಬ್ ಮಾತನಾಡಿ ಡಾ,ಬಿ,ಆರ್,ಅಂಬೇಡ್ಕರವರ ವಿಚಾರದಾರೆಗಳನ್ನು ಸಾಹಿತ್ಯ ಕಲೆಗಳ ಮೂಲಕ ಜನಮನಾಸದಲ್ಲಿ ಮೂಡಿಸುವ ಪ್ರಯತ್ನ ಕೈಗೆತ್ತಿಕೊಳ್ಳಲಾಗಿದೆ, ಎಂದರು ಕಾರ್ಯಕ್ರಮಕ್ಕೆ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಅವರು ಕರೆ ನೀಡಿದರು,

---

ಅಡೆ-ತಡೆ ರಹಿತ ವಾತಾವರಣ ಕಲ್ಪಿಸುವ ಯೆಸ್‌ಟು

## ಆಕ್ಸಸ್ ಅಪ್ಲಿಕೆಷನ್ ಬಳಕೆ ತರಬೇತಿ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಏಪ್ರಿಲ್ 09-: ಕೇಂದ್ರ ಸರಕಾರದ ಸುಗಮ್ಯ ಭಾರತ ಯೋಜನೆಯಡಿ ವಿಶೇಷಚೇತನರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಅಡೆ-ತಡೆ ರಹಿತ ವಾತಾವರಣ ಕಲ್ಪಿಸುವ ಅಪ್ಲಿಕೆಷನ್ ಬಳಕೆ ಸಾರ್ವಜನಿಕ ಸ್ಥಳಗಳ ಆಡಿಟ್ ನಿರ್ವಹಿಸುವುದರ ಕುರಿತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ಹೇಳಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಇಂದು ಏ.9ರ ಬುಧವಾರ ರಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಎ.ಪಿ.ಡಿ ಸಂಸ್ಥೆ ವತಿಯಿಂದ ಕೇಂದ್ರ ಸರಕಾರದ ಸುಗಮ್ಯ ಭಾರತ ಯೋಜನೆಯಡಿ ವಿಶೇಷಚೇತನರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಅಡೆ-ತಡೆ ರಹಿತ ವಾತಾವರಣ ಕಲ್ಪಿಸುವ ಅಪ್ಲಿಕೆಷನ್ ಬಳಕೆ ಸಾರ್ವಜನಿಕ ಸ್ಥಳಗಳ ಆಡಿಟ್ ತರಬೇತಿ ಕಾರ್ಯಾಗಾರವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ, ನಗರ, ವಿವಿಧೊದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಎ.ಪಿ.ಡಿ ಸಂಸ್ಥೆಯವರು ತರಬೇತಿ ನೀಡಿದರು.

ಯೆಸ್ ಟು ಆಕ್ಸಸ್ ಅಪ್ಲಿಕೆಷನ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಮುಕ್ತವಾಗಿ ಸಾರ್ವಜನಿಕರಿಗೆ ಲಭ್ಯವಿದ್ದು, ಸಾರ್ವಜನಿಕರು ಸಹ ಈ ಅಪ್ಲಿಕೆಷನ್ ಬಳಸಬಹುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ್, ವಿವಿಧೊದ್ದೇಶ ಪುನರ್ವಸತಿ ಕಾರ್ಯಕರ್ತರು, ಇನ್ನಿತರರು ಉಪಸ್ಥಿತರಿದ್ದರು.

# ಕೌಶಲ್ಯಾಧಾರಿತ ಕೋರ್ಸುಗಳಿಂದ ಉದ್ಯೋಗ ಸೃಷ್ಟಿ : ಪ್ರೊ.ಎಂ. ಮುನಿರಾಜು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.09–ವಿದ್ಯಾರ್ಥಿಗಳು ಕೌಶಲ್ಯಾಧಾರಿತ ಕೋರ್ಸುಗಳನ್ನು ಕಲಿತಲ್ಲಿ ಭವಿಷ್ಯದಲ್ಲಿ ಅವು ಉದ್ಯೋಗ ಸೃಷ್ಟಿಸುತ್ತವೆ ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ. ಮುನಿರಾಜು ಅವರು ಹೇಳಿದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಹಾಗೂ ಗಾಲಿ ರುಕ್ಮಣಮ್ಮ ಚೆಂಗಾರೆಡ್ಡಿ ಸ್ಮಾರಕ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜು ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ "ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ" ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಇನ್ಫೋಸಿಸ್‌ನ ನಾರಾಯಣ ಮೂರ್ತಿ, ಸುಧಾಮೂರ್ತಿ, ಅಂಬಾನಿ, ಅದಾನಿ ಇನ್ನು ಮುಂತಾದ ಸಾಧನೆಗೈದ ವ್ಯಕ್ತಿಗಳ ಬಗ್ಗೆ ತಿಳಿದುಕೊಳ್ಳಬೇಕು. ಮುಂಬರುವ ದಿನಗಳಲ್ಲಿ ಕೌಶಲ್ಯಾಧಾರಿತ ಕೋರ್ಸ್ಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾಗುವುದು ಎಂದರು.

ಖ್ಯಾತ ಸಾಹಿತಿಯಾದ ಪ್ರೊ. ಎಸ್.ಜಿ ಸಿದ್ದರಾಮಯ್ಯ ಅವರು ಮಾತನಾಡಿ, ದೇಶವು ಸಾಂಪ್ರದಾಯಿಕ ಗುಲಾಮಗಿರಿಯಿಂದ ಮುಕ್ತವಾದರೆ ಮಾತ್ರ ಸಂಪೂರ್ಣ ಸ್ವಾತಂತ್ರ್ಯ ಹೊಂದಬಹುದು ಎಂದು ಹೇಳಿದರು. ಹನ್ನೆರಡನೆ ಶತಮಾನದಲ್ಲಿ ಬಸವಣ್ಣನವರ ಕ್ರಾಂತಿಕಾರಕ ಮಾನವ ಧರ್ಮ ಹೊಸ ವೈಚಾರಿಕತೆಯೆಡೆಗೆ ಸಾಗಿತ್ತು. ಭಾಷೆ, ಸಂಸ್ಕೃತಿ, ಪರಂಪರೆಯಲ್ಲಿ ಚಳುವಳಿಗಳಿಂದ ಮೂಡಿದ ಹೊಸ ಬದಲಾಣೆಯಿಂದಾಗಿ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಗುರುತಿಸಿದೆ. ಅಭಿವೃದ್ಧಿಪರ ವಾಸ್ತವಿಕತೆಯಲ್ಲಿ ಜನರು ಜೀವಿಸಿದಾದ ನಿಜವಾದ ಸ್ವಾತಂತ್ರ್ಯದ ಅನುಭವ ನಮಗೆ ಸಿಗುತ್ತದೆ. ಮಹಾನ್ ವ್ಯಕ್ತಿತ್ವವುಳ್ಳ ಗಾಂಧೀಜಿ, ಅಂಬೇಡ್ಕರ್ ಅವರ ವೈಚಾರಿಕ ತತ್ವಗಳಿಂದ ಇಂದು ದೇಶವನ್ನು ಗುರುತಿಸಲಾಗುತ್ತಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ವಿವಿ ಯ ಕಲಾ ನಿಕಾಯದ ಡೀನ್‌ರಾದ ಪ್ರೊ. ಎನ್. ಶಾಂತನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಲೇಜು ಪ್ರಾಂಶುಪಾಲರಾದ ಡಾ.ಎನ್.ಸತ್ಯವತಿ, ಗಣಕಯಂತ್ರ ವಿಭಾಗದ ಡಾ.ಹೆಚ್.ರಾಚಪ್ಪ, ಡಾ.ಹನುಮೇಶ್, ಜಯಶೀಲ, ಡಾ.ವೇದಾಂತ ಸೇರಿದಂತೆ ಕಾಲೇಜು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ತಳಬಾಲ್-ತಳಕಲ್ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕುಕನೂರು ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ, ತಳಕಲ್ ಹೆರಿಗೆ ಆಸ್ಪತ್ರೆ ಹಾಗೂ ಗ್ರಾಮದ ಸರಕಾರಿ ವಸತಿಯುಕ್ತ ಮಾದರಿಯ ಪ್ರಥಮ ದರ್ಜೆ ಕಾಲೇಜು ತಳಬಾಲ್-ತಳಕಲ್ ಇವರ ಸಂಯುಕ್ತಾಶ್ರಯದಲ್ಲಿ ಸೋಮವಾರ ವಿಶ್ವ ಆರೋಗ್ಯ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ. ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿ, ವಿಶ್ವದಾದ್ಯಂತ, ರಾಷ್ಟ್ರದಾದ್ಯಂತ ಹಾಗೂ ರಾಜ್ಯದಾದ್ಯಂತ "ವಿಶ್ವ ಆರೋಗ್ಯ ದಿನಾಚರಣೆ" ಕಾರ್ಯಕ್ರಮ ಆಚರಿಸಲಾಗುತ್ತದೆ. ಈ ಕಾರ್ಯಕ್ರಮ ಆಚರಿಸುವ ಉದ್ದೇಶ ಎಲ್ಲಾ ರಾಷ್ಟ್ರ ಮತ್ತು ರಾಜ್ಯಗಳಲ್ಲಿ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವುದು, ಆರೋಗ್ಯದ ಬಗ್ಗೆ ಜನಜಾಗೃತಿ ಮೂಡಿಸುವುದಾಗಿದೆ. ಪ್ರತಿ ವರ್ಷ ಏಪ್ರಿಲ್-7ರಂದು "ವಿಶ್ವ ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. "ಆರೋಗ್ಯಕರ ಆರಂಭಗಳು ಮತ್ತು ಭರವಸೆಯ ಭವಿಷಕ್ಕಾಗಿ" (ಊಜಚಿಟಣಥಿ ಃಜರುಟಿಟಿಟಿರ, ಊಂಠಿಜ-ಜಿಣಟ ಈಣಣಣಡಿಜ) ಎಂಬ ಘೋಷವಾಖ್ಯದೊಂದಿಗೆ ಈ ವರ್ಷದ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. 1950ನೇ ಇಸವಿಯಿಂದ ನಿರಂತರವಾಗಿ ಏಪ್ರೀಲ್-7 ರಂದು ಈ ದಿನಾಚರಣೆಯನ್ನು ಒಂದೊಂದು ಘೋಷ ವಾಕ್ಯದೊಂದಿಗೆ ಆಚರಿಸಲಾಗುತ್ತದೆ. ಆರೋಗ್ಯವಂತ ಸಮಾಜ ನಿರ್ಮಾಣಕ್ಕಾಗಿ ಇಲಾಖೆ ಯೋಜನೆಗಳನ್ನು ಪಡೆದುಕೊಂಡು ದೇಶವನ್ನು ರೋಗಮುಕ್ತಗೊಳಿಸಿ, ಸುಂದರವಾದ ಅಥವಾ ಆರೋಗ್ಯಕರವಾದ ವಾತವರಣವನ್ನು ನಿರ್ಮಿಸಿ, ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ ಎಂಬ ಮಂತ್ರದೊಂದಿಗೆ ವಿದ್ಯಾರ್ಥಿಗಳು ತಮ್ಮ ತಮ್ಮ ಗ್ರಾಮಗಳಲ್ಲಿ ಆರೋಗ್ಯಕರ ಮಾಹಿತಿ ಕುರಿತು ಅರಿವು ಮೂಡಿಸಬೇಕು ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕೆಲವು ಕ್ರಮಗಳನ್ನು ಕೈಗೊಂಡಿ-ದ್ದು, ಆರೋಗ್ಯ ಸೇವೆಗಳನ್ನು ಬಲಪಡಿಸಲಾಗುವುದು ಮತ್ತು ಸುರಕ್ಷಿತ ಸೇವಾ ವ್ಯವಸ್ಥೆಗೆ ಆದ್ಯತೆ ನೀಡಲಾಗುವುದು. ಸ್ತ್ರೀರೋಗ ಮತ್ತು ಪ್ರಸೂತಿ ಕ್ಷೇತ್ರದಲ್ಲಿ ನಿರ್ಣಾಯಕ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು. ಆರೋಗ್ಯ ವೃತ್ತಿಪರರಿಗೆ ಪ್ರೋತ್ಸಾಹ ನೀಡಲಾಗುವುದು. ಆರೋಗ್ಯ ವಿತರಣಾ ವ್ಯವಸ್ಥೆಗಳನ್ನು ಅತ್ಯತ್ತಮವಾಗಿ ನಿಯಮಿತ ಲೆಕ್ಕ ಪರಿಶೋಧನೆಗಳನ್ನು ನಡೆಸಲಾಗುವುದು. ವಿಶೇಷ ನವಜಾತ ಶಿಶು ಆರೈಕೆ ಘಟಕಗಳು (ಎಸ್.ಎನ್.ಸಿ.ಯು) ಮತ್ತು ನವಜಾತ ಶಿಶು ತೀವ್ರ ನಿಗಾ ಘಟಕಗಳ (ಎನ್.ಐ.ಸಿ.ಯು) ಸೇರ್ಪಡೆಯ ಮೂಲಕ ನವಜಾತ ಶಿಶು ಮತ್ತು ತಾಯಿಯ ಆರೈಕೆಯನ್ನು ಹೆಚ್ಚಿಸಲಾಗುವುದ ಎಂದು ತಿಳಿಸಿದರು.

ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಸವಿತಾ ಅವರು ಅನಿಮಿಯಾ ಮುಕ್ತ ಪೌಷ್ಠಿಕ ಕರ್ನಾಟಕ ಕುರಿತು, ಮಾತನಾಡಿ, ಹದಿ-ಹರೆಯದವರು ಪೌಷ್ಠಿಕ ಆಹಾರ ಸೇವನೆ ಮಾಡಬೇಕು. ತರಕಾರಿ, ಮೊಳಕೆಕಾಲು, ಹಾಲು, ಹಣ್ಣು-ಹಂಪಲುಗಳನ್ನು ಹಾಗೂ ಹಸಿರು ಸೊಪ್ಪುಗಳನ್ನು ಹೆಚ್ಚಾಗಿ ದಿನನಿತ್ಯದ ಆಹಾರಗಳಲ್ಲಿ ಬಳಸಬೇಕು ಮತ್ತು ಪ್ರತಿವಾರ ಡಬ್ಲ್ಯೂ.ಐ.ಎಫ್.ಎಸ್ ಕಾರ್ಯಾಕ್ರಮದಡಿಯಲ್ಲಿ ನೀಡುವ ಪ್ರತಿ ಸೋಮವಾರದ ಕಬ್ಬಿಣಾಂಶದ ಮಾತ್ರೆ ಹಾಗೂ ಪ್ರತಿ 6 ತಿಂಗಳಿಗೊಮ್ಮೆ ಜಂತು ನಿವಾರಕ ಮಾತ್ರೆ ತೆಗೆದುಕೊಳ್ಳಬೇಕು ಮತ್ತು ಮುಟ್ಟಿನ ಸಮಯದಲ್ಲಿ ನೈರ್ಮಲ್ಯ ಕಾಪಡುವ ಬಗ್ಗೆ ವಿವರವಾಗಿ ತಿಳಿಸಿದರು. ನಂತರ ಎಲ್ಲಾ ವಿದ್ಯಾರ್ಥಿಗಳ ರಕ್ತಪರೀಕ್ಷೆ ಮಾಡಿ, ಕಡಿಮೆ ರಕ್ತದ ಪ್ರಮಾಣ ಹೊಂದಿದ ವಿದ್ಯಾರ್ಥಿಗಳಿಗೆ ಆಸ್ಪತ್ರೆಗೆ ಬರುವಂತೆ ತಿಳಿಸಿದರು.

ಸಮುದಾಯ ಆರೋಗ್ಯಾಧಿಕಾರಿ ಮಹೇಶ್ ಅವರು, ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಕುರಿತು ವಿವರವಾಗಿ ಮಾತನಾಡಿದರು.

ಪ್ರಾಂಶುಪಾಲರಾದ ಡಾ. ಶುಭಾ ಅವರು ಮಾತನಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಇಂದಿನ ವಿದ್ಯಾರ್ಥಿಗಳಿಗೆ ಬಹಳ ಪ್ರಯೋಜನಕಾರಿಯಾಗಿದೆ. ಜೊತೆಗೆ ವಿವಿಧ ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳ ಬಗ್ಗೆ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ, ವಾರ್ಡ್ಗಳಲ್ಲಿ ಹಾಗೂ ಸುತ್ತ ಮುತ್ತಲಿನ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾ.ಆ.ಸು ಅಧಿಕಾರಿ ಸರಸ್ವತಿ, ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಧೀಪ ಕುಮಾರ, ಸಹಾಯಕ ಪ್ರಾಧ್ಯಾಪಕರಾದ ಈ.ಆರ್.ಲಗಳೂರು, ಸುರೇಶಕುಮಾರ, ಪುಷ್ಪಾವತಿ ಕೊನಸಾರಿ, ಉಪನ್ಯಾಸಕರಾದ ಸಂತೋಷ ಕುಮಾರ ಜಾವಿ, ಮಲ್ಲಪ್ಪ ಸತ್ತೂರು, ಗ್ರಂಥಪಾಲಕರಾದ ವಸುಧಾ ಬಿ.ಎಚ್., ದೈಹಿಕ ನಿರ್ದೇಶಕರಾದ ಲಕ್ಷ್ಮೀದೇವಿ ಡಿ., ಆಶಾ ಕಾರ್ಯಕರ್ತೆ-ಯರು ಹಾಗೂ ಇತರೆ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬಸವರಾಜ ವೈ.ಎನ್ ಅವರಿಗೆ ಪಿಎಚ್‌ಡಿ ಪದವಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.09–ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿಯಾಗಿದ್ದ ಬಸವರಾಜ ವೈ.ಎನ್ ಅವರಿಗೆ ಪಿಎಚ್‌ಡಿ ಪದವಿ ಲಭಿಸಿದೆ. ವಿವಿಯ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ವೀಣಾ.ಎಂ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದ ವ್ಯವಹಾರ ಅಧ್ಯಯನ ನಿಕಾಯದಡಿ "ಕ್ವಾಲಿಟಿ ಆಫ್ ಫೈನಾನ್ಸಿಯಲ್ ರಿಪೋರ್ಟಿಂಗ್ ಬಿಫೋರ್ ಅಂಡ್ ಆಫ್ಟರ್ ಅಡಾಪ್ಷನ್ ಆಫ್ ಇನ್ಡ್ ಎಎಸ್-ಎ ಸ್ಟಡಿ ಆನ್ ಸೆಲೆಕ್ಟ್ ಐರನ್ ಅಂಡ್ ಸ್ಟೀಲ್ ಕಂಪನಿಸ್ ಆಫ್ ಇಂಡಿಯಾ " ಎಂಬ ಪ್ರೌಢ ಪ್ರಬಂಧ ಮಂಡಿಸಿದ್ದಕ್ಕೆ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

# ಏ.10, 14, ರಂದು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ ವಹಿವಾಟು ರದ್ದು

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.09– ಹಾವೇರಿ ಜಿಲ್ಲೆ ಬ್ಯಾಡಗಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆಯಲ್ಲಿ ಏ. 10 ಮತ್ತು 14 ರಂದು ಯಾವುದೇ ವಹಿವಾಟು ಇರುವುದಿಲ್ಲ.

ಏ.10 ರಂದು ಮಹಾವೀರ ಜಯಂತಿ ಹಾಗೂ ಏ.14 ರಂದು ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಸರ್ಕಾರಿ ರಜೆ ಇರುವುದರಿಂದ ಬ್ಯಾಡಗಿ ವರ್ತಕರ ಸಂಘದಿಂದ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಈ ದಿನಗಳಂದು ಒಣಮೆಣಸಿನಕಾಯಿ ವ್ಯಾಪಾರ ವಹಿವಾಟು ಇರುವುದಿಲ್ಲ ಹಾಗೂ ಎಂದಿನಂತೆ ಏ.11 ಮತ್ತು ಏ.15 ರಂದು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ ವಹಿವಾಟು ನಡೆಯುತ್ತದೆ ಎಂದು ಬಳ್ಳಾರಿ ಕೃಷಿ ಮಾರಾಟ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲಕ್ಷಾಂತರ ಕಲಾವಿದರ ಆರಾಧ್ಯ ದೈವ ಪುಟ್ಟರಾಜ ಗವಾಯಿಗಳು :- ನೂರುದ್ದೀನ್ ಗುಡಿಯಿಂದಲ್

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ಲಕ್ಷಾಂತರ ಕಲಾವಿದರ ಆರಾಧ್ಯ ದೈವ ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರು, ಪ್ರತಿ ಕಲಾವಿದರ ಹೃದಯ ಮಂದಿರದಲ್ಲಿ ಶಾಶ್ವತ ನೆಲೆಯೂರಿದ್ದಾರೆ ಎಂದು ಕುಕುನೂರು ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ನೂರುದ್ದೀನ್ ಗುಡಿಯಿಂದಲ್ ಅಭಿಪ್ರಾಯ ಪಟ್ಟರು.

ಕುಕುನೂರು ಪಟ್ಟಣದ 8ನೇ ವಾರ್ಡಿನ ದುರ್ಗಾದೇವಿ ದೇವಸ್ಥಾನದಲ್ಲಿ ಶ್ರೀ ಪಂಚಾಕ್ಷರಿ ಸಂಗೀತ ಪಾಠಶಾಲೆ ವತಿಯಿಂದ ಲಿಂಗೈಕ ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 111ನೇ ಜಯಂತೋತ್ಸವ ನಿಮಿತ್ಯ ಸಂಗೀತ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಅವರು, ಹಲವಾರು ದಶಕಗಳಿಂದ ಪಟ್ಟಣದ ಪ್ರತಿಷ್ಠಿತ ಶ್ರೀ ಪಂಚಾಕ್ಷರಿ ಸಂಗೀತ ಪಾಠಶಾಲೆ ವತಿಯಿಂದ ಹಲವಾರು ದಶಕಗಳಿಂದ ಪಂಚಾಕ್ಷರಿ ಗವಾಯಿಗಳ ಹಾಗೂ ಪುಟ್ಟರಾಜ ಗವಾಯಿಗಳವರ ಪ್ರತಿ ವರ್ಷವೂ ಜಯಂತೋತ್ಸವ ಕಾರ್ಯಕ್ರಮ ಆಚರಿಸುತ್ತ ಬರುತ್ತಿರುವುದು ಶ್ಲಾಘನೀಯ ಕಾರ್ಯ. ದಿವಂಗತ ತಬಲಾ ಪ್ರವೀಣ ಶಿವಕುಮಾರ ಕುಕನೂರವರ ಸಂಗೀತ ಸೇವೆ ಅಪಾರ, ಅವರ ಸಂಗೀತ ಕಾರ್ಯಗಳನ್ನು ಅವರ ಕುಟುಂಬದವರು ಮುಂದುವರಿಸಿ ಕೊಂಡು ಹೋಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ನಂತರ ಹಿರಿಯ ಶಿಕ್ಷಕರಾದ ಶರಣಪ್ಪ ಕೊಪ್ಪದ ಮಾತನಾಡಿ, ಸಂಗೀತ ಹಲವಾರು ರೋಗ ರಜಿನಗಳನ್ನು ದೂರ ಮಾಡುತ್ತದೆ, ಸಂಗೀತಕ್ಕೆ ಸೋಲದ ಮನಸ್ಸುಗಳಿಲ್ಲ, ಈಗಿನ ಮಕ್ಕಳು ಸಂಗೀತವನ್ನು ಕೇಳುವುದು ಆಲಿಸುವುದು ಕಲಿಯುವುದು ಬಹಳ ಅವಶ್ಯಕತೆ ಎಂದರು.

ಕುಕನೂರು ಸಂಗೀತ ಪಾಠಶಾಲೆಯ ವಿದ್ಯಾರ್ಥಿನಿಯರಾದ ಖುಷಿ ಜಮಖಂಡಿ, ಶ್ರೇಯ ಕುಂಬಾರ, ಶ್ರೇಯ ಪಟ್ಟಣಶೆಟ್ಟಿ, ಸಾನಿಯಾ, ಸೇರಿದಂತೆ ರವರಿಂದ ಸಂಗೀತ ಕಾರ್ಯಕ್ರಮ ಜರಗಿತು.

ಈ ಸಂದರ್ಭದಲ್ಲಿ ಶ್ರೀ ಪಂಚಾಕ್ಷರಿ ಸಂಗೀತ ಪಾಠಶಾಲೆಯ ಅಧ್ಯಕ್ಷ, ಸಂಗೀತ ಶಿಕ್ಷಕ ಮುರಾರಿ ಭಜಂತ್ರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷ ಪ್ರಶಾಂತ ಆರಬೇರಳಿನ್, ಯುವ ಮುಖಂಡ ಮಂಜುನಾಥ್ ಮ್ಯಾದರ್, ಮಹಾಂತೇಶಪ್ಪ ವಾರದ, ಮಂಜುನಾಥ್ ಯಡಿಯಾಪುರ, ಬಸವರಾಜ ಭಜಂತ್ರಿ, ಶಶಿಕುಮಾರ್ ಭಜಂತ್ರಿ, ಕಾಸಿಂಸಾಬ್ ಚೋಕಾಲಿ, ಸುಮಂತ್ ಭಜಂತ್ರಿ, ಮಲ್ಲಪ್ಪ ವಡ್ಡಟ್ಟಿ, ಕಲಾವಿದ ಖಾದಿರಸಾಬ್ ಸಿಗ್ನಿಕೊಪ್ಪ, ಚಂದ್ರಶೇಖರ್ ಭಜಂತ್ರಿ, ಕರಿಯಪ್ಪ ಭಜಂತ್ರಿ, ಮಹಿಳೆಯರು ಮಕ್ಕಳು ಇತರರು ಉಪಚಿತರಿದ್ದರು.

# ಭಕ್ತಿ ಭಾವಕ್ಕೆ ಸಾಕ್ಷಿಯಾದ ಮೋರನಹಳ್ಳಿಯ ಜಾತ್ರೆ.

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತಾಲ್ಲೂಕಿನ ಮೋರನಹಳ್ಳಿ ಗ್ರಾಮದ ಗ್ರಾಮದೇವತೆ ದುರ್ಗಾದೇವಿಯ ಜಾತ್ರೆಯು ಅದ್ದೂರಿಯಾಗಿ ಜರುಗಿತು. ಭಕ್ತರ ಇಷ್ಟಾರ್ಥ ಈಡೇರಿಸುವ ಭಾಗ್ಯವಿಧಾತೆ ಎಂದೆ ಖ್ಯಾತಿಯಾದ ದುರ್ಗಾದೇವಿ ಜಾತ್ರೆಯು ಮೂರು ದಿನಗಳಿಂದ ಸಕಲ ಧಾರ್ಮಿಕ ಕಾರ್ಯಗಳಿಂದ ಪ್ರಾರಂಭವಾಗಿ ನಿನ್ನೆ ಬೆಳಿಗ್ಗೆ ಗಂಗಾಸ್ಥಳದಿಂದ ಮೆರವಣಿಗೆ ಪ್ರಾರಂಭವಾಗಿ ಊರಿನ ಪ್ರಮುಖ ಬೀದಿಯಲ್ಲಿ ಭವ್ಯ ಮೆರವಣಿಗೆ ಸಂಚರಿಸಿ ಭಕ್ತರ ಭಕ್ತಿಗೆ ಸಾಕ್ಷಿಯಾಗಿ ಗ್ರಾಮದಲ್ಲಿ ಹರಕೆಹೊತ್ತ ಮಹಿಳೆಯರು ಮಕ್ಕಳು ಯುವಕರು ದೀರ್ಘ ದಂಡ ನಮಸ್ಕಾರ ಹಾಕುವ ಮೂಲಕ ಹರಕೆ ತೀರಿಸಿದರು.

ಹೂವಿನ ಪಲ್ಲಕ್ಕಿಯಲ್ಲಿ ಅಲಂಕಾರಗೊಂಡ ದರ್ಗಾದೇವತೆಯ ದರ್ಶನ ಪಡೆದು ಭಕ್ತರು ಪುನೀತರಾದರು. ಡೊಳ್ಳಿನ ಮಜಲು ಜಾತ್ರೆಯ ಮೆರಗು ಹೆಚ್ಚಿಸಿದಂತಿತ್ತು. ಯುವಕರು ಮೆರವಣಿಗೆಯ ಸಾಲಿನುದ್ದಕ್ಕೂ ಹರಕೆಯ ಬಿಂದಿಗೆಯ ನೀರಾಕಿ ಬಿಸಲಿನ ದಗೆಗೆ ತಂಪೆರೆದರು. ಸಂಜೆ ಜಾಂಡಾ ಲೀಲಾವು ನಡೆದ ನಂತರ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ಜರುಗಿತು. ಮೂರು ದಿನಗಳ ಕಾಲವೂ ದೇವಿಗೆ ವಿಶೇಷ ಪೂಜೆ ನೈವೈದ್ಯ ಅರ್ಪಿಸಲಾಯಿತು. ಇದೇ ವೇಳೆ ಅನ್ನ ಸಂತರ್ಪಣೆ ಜರುಗಿತು. ಸುತ್ತಮುತ್ತಲಿನ ಗ್ರಾಮಸ್ಥರು, ಮುಖಂಡರು ದೇವಿಯ ದರುಶನ ಪಡೆದು ಪುನೀತರಾದರು.

# ಹಾವು ಕಡಿತಕ್ಕೊಳಗಾದ ವ್ಯಕ್ತಿಯನ್ನು ಗಾಬರಿಗೊಳಿಸದೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಿ: ಡಾ. ಮರಿಯಂಬಿ ವಿ.ಕೆ.



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.09–ಹಾವು ಕಡಿತಕ್ಕೊಳಗಾದ ವ್ಯಕ್ತಿಯನ್ನು ಗಾಬರಿಗೊಳಿಸದೆ, ಅವರೊಂದಿಗೆ ಶಾಂತವಾಗಿ ವರ್ತಿಸಿ, ಹತ್ತಿರದ ಆಸ್ಪತ್ರೆಗೆ ತಕ್ಷಣವೇ ಕರೆದು-ಕೊಂಡು ಬಂದು ಚುಚ್ಚುಮದ್ದು ಕೊಡಿಸುವ ಮೂಲಕ ಜೀವ ಹಾನಿಯಾಗದಂತೆ ಮಾಡಲು ಕೈ ಜೋಡಿಸಿ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸರ್ವೇಕ್ಷಣಾ ಘಟಕ ಹಾಗೂ ಗ್ರಾಮ ಪಂಚಾಯತ್, ಪ್ರಾಥಮಿಕ ಆರೋಗ್ಯ ಕೇಂದ್ರ ಶಿಡಿಗಿನಮೊಳ ಇವರ ಸಂಯುಕ್ತಾಶ್ರಯದಲ್ಲಿ "ಹಾವು ಕಡಿತ ಕುರಿತು ಜಾಗೃತಿ" ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಾವು ಕಚ್ಚಿದಾಗ ಗಾಬರಿಯಾಗುವುದು ಸಾಮಾನ್ಯವಾಗಿದ್ದು, ಇದ-ರಿಂದ ವ್ಯಕ್ತಿಯ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಅದರಲ್ಲೂ ವಿಷಕಾರಿ ಹಾವು ಕಡಿತದ ಸಂದರ್ಭದಲ್ಲಿ ವ್ಯಕ್ತಿಯನ್ನು ಯಾವುದೇ ವಾಹನ ಅಥವಾ 108 ಅಂಬುಲೆನ್ಸ್ ಮೂಲಕ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಮೊದಲ ಆದ್ಯತೆ ನೀಡಬೇಕು ಎಂದರು.

ವೈದ್ಯಾಧಿಕಾರಿ ಡಾ.ಸಂತೋಷ್ ಹೆಬ್ಬಾಳ್ ಮಾತನಾಡಿ, ಹಾವು ಕಚ್ಚಿದಾಗ ಕಚ್ಚಿದ ಜಾಗದ ಪಕ್ಕದಲ್ಲಿ ಬಟ್ಟೆಯನ್ನು ಕಟ್ಟುವುದು, ಬ್ಲೇಡ್ ಅಥವಾ ಚಾಕುವಿನಿಂದ ಗಾಯ ಮಾಡುವುದು, ಗಾಯವನ್ನು ಸುಡುವುದು, ನಾಟಿ ಔಷಧಿಗಳನ್ನು ನೀಡುವುದು ಮುಂತಾದವುಗಳನ್ನು ಮಾಡಬೇಡಿ ಎಂದು ಸಾರ್ವಜನಿಕರಲ್ಲಿ ವಿನಂತಿಸಿದರು.

*ಹಾವು ಕಚ್ಚಿದಾಗ ತೆಗೆದುಕೊಳ್ಳಬೇಕಾದ ಕ್ರಮಗಳು:*

ಹಾವು ಕಚ್ಚಿದಾಗ ರೋಗಿಯನ್ನು ಕೂರಿಸಿ ಹಾವು ಕಚ್ಚಿರುವ ಭಾಗ ಹೃದಯದ ಕೆಳಗೆ ಬರುವ ಹಾಗೆ ಇರಲಿ ರಕ್ತಪರಿಚಲನೆಗೆ ತಡೆಯಾಗುವಂತಹ ಕೈ ಗಡಿಯಾರ, ಬಳೆ, ಉಂಗುರ ಮುಂತಾದವುಗಳನ್ನು ತೆಗೆದು, ಕಚ್ಚಿದ ಭಾಗವು ಅಲುಗಾಡದಂತೆ ನೋಡಿಕೊಳ್ಳಬೇಕು.

ಮುಖ್ಯವಾಗಿ ಆಸ್ಪತ್ರೆಗೆ ಹೋಗುವಾಗ ವ್ಯಕ್ತಿಯ ರೋಗ ಲಕ್ಷಣಗಳಾದ ತೇಲುಗಣ್ಣು, ಕಣ್ಣು ಮುಚ್ಚುವುದು, ನಾಲಿಗೆ ತೊದಲುವಿಕೆ, ನುಂಗಲು ಕಷ್ಟವಾಗುವುದು, ಉಸಿರಾಟ ತೊಂದರೆ ಮುಂತಾದವುಗಳನ್ನು ಗಮನಿಸಬೇಕು.

ಹಾಗೆಯೇ ಗಾಯದ ಜಾಗದಲ್ಲಿ ತೀವ್ರ ಉರಿ, ನೋವು ಹರಡುವಿಕೆ ಅಥವಾ ಊದುವಿಕೆ ಗಾಯದ ಸುತ್ತ ಬಣ್ಣಹೀನವಾಗುವುದು, ಕೆಳಬೆನ್ನಿನಲ್ಲಿ ನೋವು ಮುಂತಾದ ಲಕ್ಷಣಗಳು ಅಂಗಾಂಗಕ್ಕೆ ಹಾನಿ ಮಾಡುವ ವಿಷದ ಅಂಶವಾಗಿರುತ್ತದೆ.

ಈ ಲಕ್ಷಣಗಳನ್ನು ರೋಗಿಯಲ್ಲಿ ಕಂಡುಬಂದರೆ ಜೊತೆಗಿರುವ ವ್ಯಕ್ತಿಯು ವೈದ್ಯರಿಗೆ ತಿಳಿಸುವ ಮೂಲಕ ವ್ಯಕ್ತಿಯ ಜೀವ ಕಾಪಾಡಲು ಸಾಧ್ಯವಾಗುವ ಚಿಕಿತ್ಸೆ ಒದಗಿಸಲು ಸಹಾಯಕವಾಗುತ್ತದೆ ಎಂದರು.

ಇದೇ ವೇಳೆಯಲ್ಲಿ ನಾಯಿ ಕಡಿತ, ಬೇಸಿಗೆ ಹಿನ್ನಲೆಯಲ್ಲಿ ಶುದ್ದ ನೀರಿನ ಮಹತ್ವ ಕುರಿತು ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಶಿಡಿಗಿನಮೊಳ ಗ್ರಾಮ ಪಂಚಾಯತ್ ಸದಸ್ಯರಾದ ಗಾದಿಲಿಂಗ ಗೌಡ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಸಾಂಕ್ರಾಮಿಕ ರೋಗ ತಜ್ಞರಾದ ಡಾ. ವಿಶಾಲಾಕ್ಷಿ, ಎಮ್.ಸಿಂಧು, ನವೀನ್, ಜಿಲ್ಲಾ ಕಾಲರಾ ನಿಯಂತ್ರಣಾ ವಿಭಾಗದ ಶಿವಕುಮಾರ್, ಸವಿತ, ಖಾಸಿಂವಲಿ, ಬಿಹೆಚ್‌ಇಒ ಮಹಮ್ಮದ್ ರಫೀ, ಆರೋಗ್ಯ ಸುರಕ್ಷತಾಧಿಕಾರಿಗಳಾದ ಶಕುಂತಲಮ್ಮ ಸೇರಿದಂತೆ ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಗ್ರಾಮಸ್ಥರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ವಿದ್ಯಾನಿಕೇತನ ಸಂಸ್ಥೆಯಿಂದ 100 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ: ನೆಕ್ಕಂಟಿ ಸೂರಿಬಾಬು



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಗಂಗಾವತಿ ವಿದ್ಯಾನಿಕೇತನ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ನೆಕ್ಕಂಟಿ ಸೂರಿಬಾಬು ತಮ್ಮ ಪದವಿ ಕಾಲೇಜಿನಲ್ಲಿ ಪತ್ರಕರ್ತರೊಂದಿಗೆ ಘೋಷ್ಠಿ ನಡೆಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ 32 ತಾಲೂಕು ಗಳಲ್ಲಿ ಕನಿಷ್ಠ 100 ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ಪ್ರತಿ ತಾಲೂಕಿಗೆ ಮೂರು ಜನ ಟಾಪರ್ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ವಸತಿ ಮತ್ತು ಶಿಕ್ಷಣಕ್ಕೆ ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷ ಒಂದುವರೆ ಲಕ್ಷ, ಎರಡು ವರ್ಷಕ್ಕೆ ಬರೋಬ್ಬರಿ ಮೂರು ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದರೂ ಸಹ ವಿದ್ಯಾರ್ಥಿಗಳ ಮುಂದಿನ ಉತ್ತಮ ಭವಿಷ್ಯಕ್ಕಾಗಿ ಮತ್ತು ವಿದ್ಯಾನಿಕೇತನ ಸಂಸ್ಥೆ ಸಮಾಜದ ಏಳಿಗೆಗಾಗಿ ಟಾಪರ್ ವಿದ್ಯಾರ್ಥಿಗಳ ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಉಚಿತ ಶಿಕ್ಷಣವನ್ನು ನೀಡಲು ಸಂಸ್ಥೆ ನಿರ್ಧರಿಸಿದೆ ಎಂದು ಅಧ್ಯಕ್ಷರಾದ ನೆಕ್ಕಂಟಿ ಸೂರಿಬಾಬು ವಿವರಿಸಿದರು.

ಇದೇ 202526ನೇ ಸಾಲಿನಿಂದ ಗ್ರಾಮೀಣ ಪ್ರದೇಶ ವಡ್ಡರಹಟ್ಟಿಯಲ್ಲಿ ಐಸಿಎಸ್ ಈ ಸಿಲಬಸ್ ನೊಂದಿಗೆ ಶ್ರೀ ವಿದ್ಯಾನಿಕೇತನ ಇಂಟರ್‌ನ್ಯಾಷನಲ್ ಸ್ಕೂಲ್ – ಪ್ರಾರಂಭಿಸಲಾಗುತ್ತಿದ್ದು. ಕಲ್ಯಾಣ ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಇಂತಹ ಒಂದು ಯೋಜನೆಗೆ ನಮ್ಮ ಸಂಸ್ಥೆ ಕೈ ಹಾಕಿದೆ.

*ನಮ್ಮ ದೃಷ್ಟಿಕೋನ:

ನೈತಿಕ, ಮೌಲ್ಯಾಧಾರಿತ. ತಂತ್ರಜ್ಞಾನ ಸಂಚಾಲಿತ ಮತ್ತು ಸಂಸ್ಕೃತಿಯಿಂದ ಸಶಕ್ತಗೊಳಿಸಿದ ಶಿಕ್ಷಣದ ಮೂಲಕ ಭವಿಷ್ಯದ ನಾಯಕರನ್ನು ರೂಪಿಸುವುದು.

*ನಮ್ಮ ಧ್ಯೆಯ :

ಬೌದ್ಧಿಕ, ಭಾವನಾತ್ಮಕ ಮತ್ತು ನೈತಿಕ ಬೆಳವಣಿಗೆಯನ್ನು ಉತ್ತೇಜಿಸುವುದು. ವೈಶಿಷ್ಟ್ಯಪೂರ್ಣ ತಾಂತ್ರಿಕ ಕೌಶಲ್ಯಗಳೊಂದಿಗೆ ಸಶಕ್ತಗೊಳಿಸುವುದು. ದೃಢವಾದ ಮೌಲ್ಯಗಳೊಂದಿಗೆ ನಾಯಕತ್ವದ ಗುಣಗಳನ್ನು ಬೆಳೆಸುವುದು.

ಸಾಂಸ್ಕೃತಿಕ ವೈವಿಧ್ಯತೆ ಮತ್ತು ಪರಂಪರೆಯನ್ನು ಸಂಭ್ರಮಿಸುವುದು.

ನಾವೀನ್ಯತೆ, ನಮ್ಮತೆ ಮತ್ತು ಆತ್ಮವಿಶ್ವಾಸವನ್ನು ಪ್ರೋತ್ಸಾಹಿಸುವುದು.

ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಮತ್ತು ನಿರಂತರ ಕಲಿಕೆಯನ್ನು ಉತ್ತೇಜಿಸುವುದು.

ದೇಶದ ಐಕ್ಯತೆ, ಸಮಗ್ರತೆ ಮತ್ತು ಸಾರ್ವಭೌಮತೆಯ ಮನೋಭಾವವನ್ನು ರೂಪಿಸುವುದು.

*ವೈಶಿಷ್ಟತೆಗಳು:

ಆಧುನಿಕ ತರಗತಿಗಳು ಸ್ಮಾರ್ಟ್ ಬೋರ್ಡ್‌ಗಳೊಂದಿಗೆ, ಸುಸಜ್ಜಿತ ಗ್ರಂಥಾಲಯ, ಸೈನ್ಸ್ ಲ್ಯಾಬ್‌ಗಳು,

ಕಂಪ್ಯೂಟರ್ ಲ್ಯಾಬ್ /ಗಣಿತ ಲ್ಯಾಬ್, ಯೋಗ ತರಬೇತಿ ಕೊಠಡಿ,

ನೃತ್ಯ ಹಾಗೂ ಸಂಗೀತ ತರಬೇತಿ ಕೊಠಡಿ (ಪಾಶ್ಚಾತ್ಮ ಮತ್ತು ಶಾಸ್ತ್ರೀಯ) (ಕಲಾ ಮತ್ತು

ಕರಕುಶಲ ತರಬೇತಿ ಕೊಠಡಿ,

ವೈದ್ಯಕೀಯ ಕೊಠಡಿ (ಇನ್‌ಫರ್ಮರಿ), ಕ್ರೀಡಾಂಗಣ (ಒಳಾಂಗಣ ಮತ್ತು ಹೊರಾಂಗಣ) । ಎ.ವಿ ರೂಮ್, ಟಿಂಕ-ರಿಂಗ್ ಲ್ಯಾಬ್ ಹೀಗೆ ಅನೇಕ ಸೌಲಭ್ಯಗಳೊಂದಿಗೆ ಕೊಪ್ಪಳ ಜಿಲ್ಲೆಗೆ ಪಾದಾರ್ಪಣೆ ಮಾಡಿದೆ ಇದರ ಸದುಪಯೋಗವನ್ನು ಕಲ್ಯಾಣ ಕರ್ನಾಟಕ ಭಾಗದ ಮತ್ತು ವಿಶೇಷವಾಗಿ ಕೊಪ್ಪಳ ಜಿಲ್ಲೆಯ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ವಿದ್ಯಾನಿಕೇತನ ಸಮೂಹ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು, ಬೋಧಕರು ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.

# ರೋಗಗಳ ಉಪಶಮನಕ್ಕೆ ಹೋಮಿಯೋಪಥಿ ಸಹಕಾರಿ-ಡಾ.ಮಂಜುನಾಥ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ಹೋಮಿಯೋಪಥಿ ಪ್ರಪಂಚದಾದ್ಯಂತ ಅಧಿಕ ಜನ ಉಪಯೋಗಿಸುವ ಎರಡನೇಯ ಅತೀದೊಡ್ಡವೈದ್ಯಪದ್ಧತಿಯಾಗಿದ್ದು, ರೋಗಗಳ ಬೇರು ಸಮೇತ ಉಪಶಮನಕ್ಕೆ ಸಹಕಾರಿಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ.ಡಿ.ಎನ್ ಹೇಳಿದರು.

ನಗರದಲ್ಲಿ ಬಿ.ವಿ.ವಿ.ಎಸ್ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ ವಿಶ್ವಹೋಮಿಯೋಪಥಿ ದಿನಾಚರಣೆ ಹಾಗೂ ಪಿತಾಮಹ ಡಾ.ಸ್ಯಾಮುಯನ್ ಹಾನಿಮನ್ 270 ನೇ ಜನ್ಮ ದಿನಾಚಾರಣೆ ಅಂಗವಾಗಿ ಬುಧವಾರ ಆಯೋಜಿಸಿದ್ದ ವಾಕಥಾನ್ - ವಾಕ್ ಫಾರ್ ಹೋಮಿಯೋಪಥಿಗೆ ಹಸಿರು ನಿಶಾನೆ ತೋರಿ ಅವರು ಚಾಲನೆ ನೀಡಿದರು.

ಹೋಮಿಯೋಪಥಿಕ್ ಅತ್ಯುತ್ತಮ ವೈದ್ಯ ಉಪಚಾರ ಪದ್ಧತಿಯಾಗಿದ್ದು, ಇದರಿಂದ ರೋಗಗಳ ಬೇರು ಸಮೇತ ಉಪಶಮನ ಪರಿಣಾಮಕಾರಿಯಾಗಿರುವುದರಿಂದ ಜಗತ್ತಿನಲ್ಲಿ ಹೆಚ್ಚು ಜನ ಈ ಪದ್ಧತಿ ಅನುಸರಿತ್ತಿದ್ದಾರೆ ಎಂದು ಹೇಳಿದ ಡಾ.ಮಂಜುನಾಥ,ಬಿ.ವಿ.ವಿ.ಸಂಘದ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಈ ಪದ್ಧತಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಎಸ್.ಜಿ.ಮಠ ಮಾತನಾಡಿ, ಸಾಂಕ್ರಾಮಿಕ - ಅಸಾಂಕ್ರಾಮಿಕ ರೋಗಗಳ ಹತೋಟಿಯಲ್ಲಿ ಆಪದ್ಬಾಂದವನಂತಿರುವ ಹೋಮಿಯೋಪಥಿ ಔಷಧಗಳನ್ನು ಸಮಾಜದ ಕಡೆಯ ಪ್ರಜೆಗೂ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನವನ್ನು ಆಯುಷ್ ವೈದ್ಯರು ಮಾಡಬೇಕೆಂದರು.

ಬವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮಾತನಾಡಿ, ನಮ್ಮ ಸಂಸ್ಥೆಯ ವತಿಯಿಂದ ಪ್ರಾರಂಭಿಸಿರುವ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಲ್ಲ ರೀತಿಯ ಆರೋಗ್ಯ ಸಮಸ್ಯೆಗಳಿಗೆ ಉತ್ತಮ ಚಿಕಿತ್ಸಾ ಸೌಲಭ್ಯಗಳಿವೆ. ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ,ಪ್ರಾಚಾರ್ಯ ಡಾ.ಅರುಣ ಹೂಲಿ,ಪ್ರಾಧ್ಯಾಪಕರುಗಳಾದ ಡಾ.ರವಿ. ಕೋಟೆಣ್ಣವರ, ಡಾ. ಅಮರೇಶ ಬಳಗಾನೂರ,ಡಾ.ರುದ್ರೇಶ ಕೊಪ್ಪಳ, ಡಾ.ವಿ.ಎಸ್.ಸಂಕೇಶ್ವರಿ,ಡಾ.ಅಖಿಲಾ ಹುಲ್ಲೂರ,ಡಾ.ವಿಜಯಲಕ್ಷ್ಮೀ ಹಾಗೂ ಎ.ಎಫ್.ಆಯ್ ಸಂಘಟನೆಯ ಪದಾಧಿಕಾರಿಗಳಾದ ಡಾ.ಎಸ್. ಎನ್.ಬಾಲರೆಡ್ಡಿ.ಡಾ.ಚಂದ್ರಶೇಖರ ಕಿರಗಿ. ಡಾ.ನಾಗರಾಜ ಬೇವರಗಿ ಡಾ.ಶಿವಪ್ರಕಾಶ ಅಯ್ಯನಗೌಡರ, ಡಾ.ವಿ.ಸಿ.ಹಿರೇಮಠ ಇದ್ದರು. ಸೃಷ್ಟಿ ತೋಟದ ಸ್ವಾಗತಿಸಿ ಹೋಮಿಯೋಪಥಿ ವೈದ್ಯಪದ್ಧತಿಯ ಕುರಿತು ಮಾತನಾಡಿದರು.

# ಅಕ್ಕಮಹಾದೇವಿ ಸ್ತ್ರೀವಾದಿ ಚಳವಳಿಯ ಪ್ರತಿಪಾದಕಿ: ಗುರುಪಾದ ಶ್ರೀಗಳು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ಅಕ್ಕಮಹಾದೇವಿ ಶರಣ ಚಳುವಳಿಯ ಪ್ರಮುಖರಾಗಿ, ಸ್ತ್ರೀವಾದಿ ಚಳವಳಿಯ ನಿಜವಾದ ಪ್ರತಿಪಾದಕಿಯಾಗಿದ್ದರು ಎಂದು ಬೀಳಗಿ ಕಲ್ಮಠದ ಪೂಜ್ಯ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಬಿ.ವಿ.ವಿ.ಎಸ್ ಅಕ್ಕನ ಬಳಗದ 87ನೇ ವಾರ್ಷಿಕೋತ್ಸವದ ನಿಮಿತ್ತ 5 ದಿನಗಳ ಕಾಲ ನಡೆಯುವ ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತ್ಯುತ್ಸವದ ಮೊದಲ ದಿನ ಮಂಗಳವಾರ ಬಿ.ವಿ.ವಿ.ಸಂಘದ ಮಿನಿ ಸಭಾಭವನದಲ್ಲಿ ನಡೆದ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿ ಪೂಜ್ಯರು ಮಾತನಾಡಿದರು.

ಅಕ್ಕಮಹಾದೇವಿ ವಚನ ಸಾಹಿತ್ಯದ ಪ್ರಮುಖರಲ್ಲೊಬ್ಬರು. ಕನ್ನಡದ ಪ್ರಥಮ ಮಹಿಳಾ ಕವಿಯತ್ರಿಯಾಗಿದ್ದಾರೆ. ಶರಣ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀವಾದಿ ಚಳವಳಿಯ ನಿಜವಾದ ಪ್ರತಿಪಾದಕಿಯಾಗಿ ಅವರನ್ನು ಗುರುತಿಸಬಹುದಾಗಿದೆ ಎಂದ ಗುರುಪಾದ ಶ್ರೀಗಳು, ಚಿಕ್ಕ ವಯಸ್ಸಿನಲ್ಲೇ ಸಕಲ ಸುಖವನ್ನು ತ್ಯಜಿಸಿದ ಅಕ್ಕ,ಎದುರಿಸಿದ ಪರೀಕ್ಷೆಗಳು ಬಹಳಷ್ಟು. ಸಾಕ್ಷಾತ್ ಶಿವನನ್ನು ಪತಿ ಎಂದು ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ,ಕೇಶಾಂಬರೆಯಾಗಿ ನಡೆದ ಅವಳು ಹಲವಾರು ಭಕ್ತರಿಗೆ ಮಾದರಿಯಾಗಿದ್ದಾಳೆ ಎಂದರು.

ಜ್ಯೋತಿ ಬೆಳಗಿಸಿ ಸಮಾರಂಭ ಉದ್ಘಾಟಿಸಿದ ನಿವೃತ್ತ ಉಪನ್ಯಾಸಕಿ ಡಾ.ಶ್ರೀಲತಾ ರಾವ್ ಮಾತನಾಡಿ, ತಾಯಂದಿರಿಂದ ಮಾತ್ರ ನಮ್ಮ ಸಂಸ್ಕೃತಿ ಮುಂದಿನವರಿಗೆ ತಲುಪಲು ಸಾಧ್ಯ. ಮಹಿಳೆ ಆ ದಿಶೆಯಲ್ಲಿ ಕಾರ್ಯೋನ್ಮುಖಳಾಗುವದು ಅಗತ್ಯ. ಅಕ್ಕನ ಬಳಗದವರು ಸಾಂಸ್ಕೃತಿಕ ಹರಿಕಾರರಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿದ್ದ ಅಕ್ಕಮಹಾದೇವಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕಿ ಡಾ.ಶ್ರೀಮತಿ ಎಂ.ವ್ಹಿ.ಭಾಜಪ್ಪನವರ ಮಾತನಾಡಿ, ಮಹಿಳೆ ಪ್ರತಿ ನಿತ್ಯ ಯೋಗಾಸನ, ಪ್ರಾಣಾಯಾಮ ಮಾಡುವದನ್ನು ರೂಢಿಸಿಕೊಂಡಲ್ಲಿ ಅವಳು ಆರೋಗ್ಯವಂತಳು, ನಿರೋಗಿಯಾಗಿರಲು ಸಾಧ್ಯ ಎಂದು ಹೇಳಿದರು.

ಅಕ್ಕನ ರುದ್ರ ಬಳಗದ ಅಧ್ಯಕ್ಷೆ ರಾಜೇಶ್ವರಿ ಚರಂತಿಮಠ ಮಾತನಾಡಿದರು. ಅಧ್ಯಕ್ಷತೆಯನ್ನು ಅಕ್ಕನ ಬಳಗದ ಉಪಾಧ್ಯಕ್ಷೆ ಭಾಗ್ಯಶ್ರೀ ಹಂಡಿ ವಹಿಸಿದ್ದರು. ಅಕ್ಕನಬಳಗದ ಅಧ್ಯಕ್ಷೆ ನಿರ್ಮಲಾ ಹಲಕುರ್ಕಿ, ಗೌರವಾಧ್ಯಕ್ಷೆ ಡಾ.ಅನಸುಯಾ ಕೆ-ರೂಡಿ, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯ ಅಧ್ಯಕ್ಷ ಜಿ.ಎನ್.ಪಾಟೀಲ,ಬಿ.ವ್ಹಿ.ವ್ಹಿ.ಸಂಘದ ಆಡಳಿತಾಧಿಕಾರಿ ಡಾ.ವ್ಹಿ.ಎಸ್. ಕಟಗಿಹಳ್ಳಿಮಠ, ಬಸವರಾಜ ಭಗವತಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎ.ಎಸ್.ಪಾವಟೆ ಉಪಸ್ಥಿರಿದ್ದರು.

ಅರವತ್ತು ವರ್ಷ ಪೂರೈಸಿದ ಅಕ್ಕನ ಬಳಗದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ತ್ರಿವೇಣಿ ಕೊಲ್ಹಾರ ನಿರೂಪಿಸಿದರು. ಸರೋಜಿನಿ ಗಂಗಾವತಿ ಸ್ವಾಗತಿಸಿದರು. ಶಿವಲೀಲಾ ಸಂಬಣ್ಣವರ, ಉಷಾ ಜಿಗಜಿನ್ನಿ, ಸರೋಜಿನಿ ಜಿಗಜಿನ್ನಿ, ಪರಿಚಯಿಸಿದರು. ಸುವರ್ಣ ಅಂಗಡಿ ವಂದಿಸಿದರು. ತ್ರಿವೇಣಿ ಕೊಲ್ಹಾರ ಹಾಗೂ ಗೀತಾ ದೇವಶೆಟ್ಟಿ ನಿರೂಪಿಸಿದರು.

# ಮುಗಳೊಳ್ಳಿ ಕಾಲೇಜಿನ ಬಸಮ್ಮ ತಾಲೂಕಿಗೆ ಪ್ರಥಮ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ತಾಲೂಕಿನ ಮುಗಳೊಳ್ಳಿಯ ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿನಿ ಬಸಮ್ಮ ಮಲ್ಲಮ್ಮ ಸುನಗದ ಪಿಯುಸಿಯಲ್ಲಿ ಪ್ರತಿಶತ 96 ರಷ್ಟು ಅಂಕ ಗಳಿಸಿ ತಾಲ್ಲೂಕಿಗೆ ಪ್ರಥಮ ಹಾಗೂ ಜಿಲ್ಲೆಗೆ 6 ನೇ ಸ್ಥಾನ ಪಡೆದಿದ್ದಾಳೆ.

ಕಲಾ ವಿಭಾಗದ ವಿದ್ಯಾರ್ಥಿನಿ ಬಸಮ್ಮ ಸಮಾಜಶಾಸ್ತ್ರ ವಿಷಯಕ್ಕೆ ನೂರಕ್ಕೆ ನೂರು ಅಂಕ ಗಳಿಸಿದ್ದು, ಪ್ರತಿಶತ 96 ಅಂಕ ಪಡೆದು ಕಾಲೇಜಿಗೆ ಪ್ರಥಮಳಾಗಿದ್ದರೆ, ಸೇವಂತಿ ಲಕ್ಷ್ಮಣ ಚಲವಾದಿ ಪ್ರತಿಶತ 89.33 ಅಂಕ ಗಳಿಸಿ ದ್ವಿತೀಯ, ಯಮನೂರ ರಾಮಣ್ಣ ಹೆಬ್ಬಾಳ ಶೇ.87.33 ಅಂಕ ಪಡೆದು ತೃತೀಯ ಮತ್ತು ಶೇ.84.5 ರಷ್ಟು ಅಂಕ ಪಡೆದ ಶಿವಾನಂದ ರಂಗಪ್ಪ ಕೇಸನೂರ ನಾಲ್ಕನೇ ಸ್ಥಾನ ಪಡೆದಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಎಸ್. ಎಸ್. ಬಿರಾದಾರ ತಿಳಿಸಿದ್ದಾರೆ.

# ಬಸವೇಶ್ವರ ವಿಜ್ಞಾನ ಪಪೂ ಕಾಲೇಜಿನ ಉತ್ತಮ ಸಾಧನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ನಗರದ ಬಿ.ವ್ಹಿ.ವ್ಹಿ ಸಂಘದ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪಿಯುಸಿ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಸಹನಾ 565(94.16) ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಶ್ರೀಶ ಖಾನಾಪೂರ 559 (93.16)ಅಂಕ ಪಡೆದು ದ್ವಿತೀಯ, ತನುಜಾ ಮಾಗಿ 558(93)ಹಾಗೂ ಸೃಷ್ಟಿ ಮೇಲಿನಮನಿ 558(93) ಸಮನಾದ ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ಕಾಲೇಜಿನ 12 ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕ ಪಡೆದಿದ್ದರೆ, ಸಂಸ್ಕೃತದಲ್ಲಿ ಓರ್ವ ವಿದ್ಯಾರ್ಥಿನಿ 100ಕ್ಕೆ 100 ಅಂಕ ಪಡೆದು ಸಾಧನೆ ಮಾಡಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.

ಸಾಧನೆ ತೋರಿದ ಮತ್ತು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಬಿ.ವ್ಹಿ.ವ್ಹಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಪದನಿಮಿತ್ತ ಕಾರ್ಯದರ್ಶಿ ಡಾ.ಎಸ್.ಎಮ್ ಗಾಂವಕರ, ಸಂಘದ ಆಡಳಿತಾಧಿಕಾರಿ ಡಾ.ವಿ.ಎಸ್.ಕಟಗಿಹಳ್ಳಿಮಠ, ಕಾಲೇಜಿನ ಬೋಧಕ ವರ್ಗ ಅಭಿನಂದಿಸಿದ್ದಾರೆ.

# ಗ್ರಾಪಂ ಪಿಡಿಓಗಳ ಪ್ರಗತಿ ಪರಿಶೀಲನಾ ಸಭೆ

## ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸಿಇಓ ಕುರೇರ ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸಕಾಲಿಕವಾಗಿ ಕುಡಿಯುವ ನೀರಿನ ಪೂರೈಕೆಗೆ ಕ್ರಮವಹಿಸುವಂತೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಪಂಚಾಯತ ಅಭಿವೃದ್ದಿ ಅಧಿಕಾರಿಗಳಿಗೆ ಸೂಚಿಸಿದರು.


ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಬುಧವಾರ ಜರುಗಿದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೇಸಿಗೆ ಕಾಲವಿರುವದರಿಂದ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಆ ಕೊರತೆಯನ್ನು ನೀಗಿಸಲು ತಕ್ಷಣ ಕ್ರಮಕೈಗೊಳ್ಳಲು ಮುಂದಾಗಬೇಕು. ಸಮಸ್ಯಾತ್ಮಕ ಗ್ರಾಮಗಳಿಗೆ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿ ತುರ್ತಾಗಿ ಕ್ರಮ ವಹಿಸಬೇಕು ಎಂದರು.

ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಚರ್ಚಿಸಿದ ಸಿಇಓ, ಹೆಚ್ಚಿನ ಮಾನವ ದಿನಗಳ ಸೃಜನೆ ಮಾಡಬೇಕು ಹಾಗೂ ಕಾರ್ಮಿಕರಿಗೆ ಕೂಲಿ, ಸಕಾಲದಲ್ಲಿ ವೇತನ ಪಾವತಿಗೆ ಕ್ರಮವಹಿಸಬೇಕು. ಇದಲ್ಲದೆ ಪಂಚಾಯತರಾಜ್ ಸಂಸ್ಥೆಗಳು ಮತ್ತು ಅವುಗಳ ಕಾರ್ಯನಿರ್ವಹಣೆಯ ಸ್ಥಿತಿಯನ್ನು ನಿರ್ಣಯಿಸಲಾಯಿತು. ಸ್ಥಳೀಯ ಆಡಳಿತವನ್ನು ಬಲಪಡಿಸಲು ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಯಿತು.

ವಸತಿ ಯೋಜನೆಗಳ ಪ್ರಗತಿ ಪರಿಶೀಲಿಸಿದ ಸಿಇಓ ಕುರೇರ, ಬಾಕಿ ಇರುವ ಅರ್ಜಿಗಳನ್ನು ತ್ವರಿತಗೊಳಿಸಲು ಮತ್ತು ಅರ್ಹ ಫಲಾನುಭವಿಗಳಿಗೆ ವಸತಿ ಘಟಕಗಳ ಗುಣಮಟ್ಟ ಮತ್ತು ಸಕಾಲಿಕ ಪೂರ್ಣಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಪಿಡಿಓಗಳಿಗೆ ಸೂಚನೆ ನೀಡಿದರು. ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಮತ್ತು ತಳಮಟ್ಟದಲ್ಲಿ ಸೇವೆಗಳನ್ನು ಒದಗಿಸಲು ಎಲ್ಲ ಅಧಿಕಾರಿಗಳು ಪೂರ್ವಭಾವಿಯಾಗಿ ಕೆಲಸ ಮಾಡಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಎಲ್ಲ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾಂಗ್ರೆಸ್ ಪಕ್ಷದ ಮಾಜಿ ಯೋಧರ ಘಟಕ ಜಿಲ್ಲಾ ಅಧ್ಯಕ್ಷರಾಗಿ ಪ್ರಭುಲಿಂಗಯ್ಯ ಕಾಳಹಸ್ತಿಮಠ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ಕಾಂಗ್ರೆಸ್ ಪಕ್ಷದ ಮಾಜಿ ಯೋಧರ ಘಟಕಕ್ಕೆ ಪ್ರಭುಲಿಂಗಯ್ಯ ಕಾಳಹಸ್ತಿಮಠ ಅವರನ್ನು ಜಿಲ್ಲಾ ಘಟಕದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಬುಧವಾರ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಪ್ರಭುಲಿಂಗಯ್ಯ ಕಾಳಹಸ್ತಿಮಠ ಅವರಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಪಕ್ಷದ ಧ್ವಜ ನೀಡುವ ಮುಖಾಂತರ ಅಧಿಕಾರ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಆರ್.ಬಿ.ತಿಮ್ಮಾಪೂರ, ದೇಶ ರಕ್ಷಣೆಗೆ ಪ್ರಾಣ ಒತ್ತೆಇಟ್ಟು ಸೇವೆ ಮಾಡುವ ಯೋಧರನ್ನು ಗೌರವಿಸುವುದು ಕಾಂಗ್ರೆಸ್ ಸಂಸ್ಕೃತಿ. ಯೋಧರಿಗೆ ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಲ್ಲದೇ, ಅವರ ಯಾವುದೇ ಬೇಡಿಕೆಗಳನ್ನು ಈಡೇರಿಸಲು ಬದ್ಧವಾಗಿದೆ ಎಂದು ಹೇಳಿದರು.

ಪಕ್ಷದ ಧ್ವಜ ನೀಡಿ ಅಧಿಕಾರ ವಹಿಸಿಕೊಟ್ಟ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಜಿಲ್ಲಾದ್ಯಂತ ಎಲ್ಲ ತಾಲೂಕುಗಳಲ್ಲಿ ಯೋಧರ ಸಮಿತಿ ರಚಿಸಬೇಕು ಎಂದು ಸೂಚಿಸಿದರು. ಯೋಧರಿಗೆ ಜಿಲ್ಲೆಯಲ್ಲಿ ಸಿಗಬೇಕಾದ ವಸತಿ, ಸರಕಾರದ ಯಾವುದೇ ಯೋಜನೆಯ ಕಾರ್ಯಕ್ರಮಗಳನ್ನು ಮುಟ್ಟಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಮಾಜಿ ಯೋಧರಾದ ಸಿದ್ದಲಿಂಗಯ್ಯ ವಸ್ತ್ರದ, ಪ್ಯಾರಾ ಮಿಲಿಟರಿ ಜಿಲ್ಲಾಧ್ಯಕ್ಷ ರಾಜಕುಮಾರ ಲಮಾಣಿ, ಎಂ.ಎಸ್.ಗೌಡರ, ಜಯಶ್ರೀ ಹಿರೇಮಠ, ಗಂಗಮ್ಮ ಬಾರಕೇರ, ರಮೇಶ ಜೋಗಿ, ಕಾಡಯ್ಯ ಮಠಪತಿ, ನೀಲಪ್ಪ ಬಡೆಕನ್ನವರ, ಪ್ರಭಾಕರ ಶೆಟ್ಟರ, ಬಸವರಾಜ ನೀಲಿ, ಅಬ್ದುಲರಜಾಕ ಪಲಟನ್, ಹೈದರಸಾಬ ಹಳ್ಳಿ, ವೆಂಕನಗೌಡ ಹಗೆದಾಳ, ಮಲ್ಲಪ್ಪ ಉಮಚಗಿ, ಎಸ್.ಮಡಿವಾಳ, ರಾಯಪ್ಪ ಹಾದಿಮನಿ, ಅಂಬರೀಶ ಅಗಸಿಮುಂದಿನ, ಸತ್ಯಪ್ಪ ಕಟನೂರ, ರೆಹಮಾನಸಾಬ ಸೇರಿದಂತೆ ಮಾಜಿ ಯೋಧರ ಕುಟುಂಬ ಸದಸ್ಯರು ಹಾಜರಿದ್ದರು.

ಕಾರ್ಯಕ್ರಮದಲ್ಲಿ ಪಕ್ಷದ ಪ್ರಮುಖರಾದ ಶ್ರೀನಿವಾಸ ಬಳ್ಳಾರಿ, ದ್ಯಾಮಣ್ಣ ಗಾಳಿ, ಪೀರಪ್ಪ ಮ್ಯಾಗೇರಿ, ರಾಜು ಲಮಾಣಿ, ಮಂಜುಳಾ ಕಮತಗಿ, ಎಸ್.ಎನ್.ರಾಂಪೂರ, ಅಬ್ದುಲರಜಾಕ ಬೇನೂರ, ರಕ್ಷಿತಾ ಈಟಿ, ಗುಣವಂತಿ ನಿಡೋಣಿ, ಮಮತಾಜ ಸುತಾರ, ಮಾಬೂಬಿ ತುರೇದ, ಜಮೀರಾ ಮನಿಯಾರ, ರೇಣುಕಾ ನಾರಾಯಣಕರ, ರೇಣುಕಾ ನ್ಯಾಮಗೌಡ, ಮಂಜುಳಾ ಭೂಸಾರೆ, ಸುಧಾ ಪಾಟೀಲ, ಪ್ರೇಮಾ ರಾಠೋಡ, ಜೈಬುದ್ದಿನ್ ಇಲಕಲ್ಲ, ಶಮಶ್ಯಾದ ಗೋಡೆಸವಾರ, ನಾಗಮಲ್ಲೇಶ್ವರಿ, ಕುತುಬುದ್ದೀನ್ ಖಾಜಿ, ಪವಿತ್ರಾ ಜಕ್ಕಪ್ಪನವರ ಉಪಸ್ಥಿತರಿದ್ದರು.

# ಹನುಮ ಜಯಂತಿ ವಿಶೇಷ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.9-ನವನಗರದ ಸೆಕ್ಟರ್ ನಂ.46ರಲ್ಲಿರುವ ಮಾರುತೇಶ್ವರ ದೇವಸ್ಥಾನದಲ್ಲಿ ಹನುಮ ಜಯಂತಿ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ.

ಏ.11 ಶುಕ್ರವಾರ ನವನಗರದ ಎಲ್ಐಸಿ ಸರ್ಕಲ್ ದಿಂದ ಮಾರುತೇಶ್ವರ ಮಂದಿರದವರೆಗೆ ಭವ್ಯ ಮೆರವಣಿಗೆ ನಡೆಯಲಿದ್ದು, ಸಂಜೆ 6 ಗಂಟೆಗೆ ಗುಳೇದಗುಡ್ಡದ ಅಭಿನವ ಒಪ್ಪತೇಶ್ವರ ಸ್ವಾಮೀಜಿಗಳಿಂದ ಆಶೀರ್ವಚನ ನಂತರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅರುಣೋದಯ ಶಂಕ್ರಣ್ಣ ಸಂಕಣ್ಣವರ ಅವರಿಂದ ಜಾನಪದ ಕಾರ್ಯಕ್ರಮ ನಡೆಯಲಿದೆ.

ಏ.12 ರಂದು ಹನುಮ ಜಯಂತಿ ನಿಮಿತ್ತ ಅಭಿಷೇಕ, ಅಲಂಕಾರ, ಕಳಸಾರೋಹಣ ಹೋಮಹವನ ನಡೆಯಲಿದ್ದು, ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನ ಸೇವಾ ಸಮಿತಿ ಸದಸ್ಯ ಮಲ್ಲಿಕಾರ್ಜುನ ಬುರ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪಣೆ ಸಲ್ಲಿಸಲು ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.09-ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಆಯ್ಕೆಗಾಗಿ ಅಧಿಸೂಚನೆ ಹೊರಡಿಸಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಬಿಡುಗಡೆ ಮಾಡಲಾಗಿದೆ.

ತಾತ್ಕಾಲಿಕವಾಗಿ ಆಯ್ಕೆಗೊಂಡ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಸಹಾಯಕಿಯರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಾನಗರಪಾಲಿಕೆ, ನಗರ ಸಭೆ, ಪ.ಪಂಚಾಯತ್,ಪುರಸಭೆ,ಗ್ರಾಮ ಪಂಚಾಯತ್,ಜಿಲ್ಲಾ ಉಪನಿರ್ದೇಶಕರ ಕಚೇರಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಸಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದಲ್ಲಿ ಏ.22 (ರಜೆ ದಿನಗಳನ್ನು ಹೊರತುಪಡಿಸಿ) ರಂದು ಮಧ್ಯಾಹ್ನ 1.30ರೊಳಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಿಗೆ ಸೂಕ್ತದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಬಳ್ಳಾರಿ ಗ್ರಾಮಾಂತರದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಳವಂಡಿಯ ಅಪೂರ್ವ ದ್ವಿತೀಯ ಪಿಯುಸಿಯಲ್ಲಿ ಉತ್ತಮ ಫಲಿತಾಂಶ.



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಅಳವಂಡಿ ಗ್ರಾಮದ ಹಿರಿಯರಾದ ಬಸವರಡ್ಡೆಪ್ಪ ಹಳ್ಳಿಕೇರಿ ಅವರ ಮೊಮ್ಮಗಳಾದ ಅಪೂರ್ವ ಹಳ್ಳಿಕೇರಿ ಮೂಡಬಿದಿರೆಯ ನ್ಯೂವೈಬ್ರಂಟ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 97.83% ಫಲಿತಾಂಶದೊಂದಿಗೆ ಕಾಲೇಜಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ತಂದೆ ತಾಯಿ ಇಬ್ಬರೂ ಶಿಕ್ಷಕರಾಗಿದ್ದು ಮಗಳ ಫಲಿತಾಂಶಕ್ಕೆ ಹರುಷ ವ್ಯಕ್ತಪಡಿಸಿದ್ದಾರೆ. ಕಾಲೇಜು ಆಡಳಿತ ವರ್ಗ ಹಾಗೂ ಅಳವಂಡಿಯ ಗ್ರಾಮಸ್ಥರು ಅಭಿನಂದಿಸಿದ್ದಾರೆ.

## ಮೊಣಕಾಲು ಕೀಲು ಬದಲಾವಣೆ ಶಸ್ತ್ರ ಚಿಕಿತ್ಸೆ ನಡೆಸಿದ ರಾಜ್ಯದ ಮೊದಲ ತಾಲೂಕು ಸರ್ಕಾರಿ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರ

# ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಯಶಸ್ವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್ 09-ಕಳೆದ 10 ವರ್ಷಗಳಿಂದ ವಿಪರೀತ ಮೊಣಕಾಲು ಕೀಲು ನೋವಿನಿಂದ ಬಳಲುತ್ತಿದ್ದ ಸಿಂಧನೂರು ತಾಲೂಕಿನ ಗೋರೆಬಾಳ ಗ್ರಾಮದ ನಿವಾಸಿಯಾದ ಗಂಗಮ್ಮ (75) ಅವರಿಗೆ ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಏಪ್ರೀಲ್ 06ರಂದು ಯಶಸ್ವಿ ಮೊಣಕಾಲು ಕೀಲು ಬದಲಾವಣೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು ಸಿಂಧನೂರು ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ.ನಾಗರಾಜ್ ಅವರು ತಿಳಿದ್ದಾರೆ.

ಮೊಣಕಾಲು ಕೀಲು ಮರು ಜೋಡಣಾ ಶಸ್ತ್ರ ಚಿಕಿತ್ಸೆಯನ್ನು ದೆಹಲಿಯ ಆಲ್ ಇಂಡಿಯಾ ಇನ್ಸಿಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (ಏಮ್ಸ್)ನ ನುರಿತ ವೈದ್ಯರಾದ ಡಾ.ವಿಜಯಕುಮಾರ್ ಮತ್ತು ಡಾ.ತುಷಾರ್ ನಾಯಕ್ ಅವರ ನೇತೃತ್ವದಲ್ಲಿ ಮಾಡಲಾಯಿತು.

ಈ ಶಸ್ತ್ರ ಚಿಕಿತ್ಸೆಗೆ ತಜ್ಞರಾದ ಡಾ.ಸಲಾವುದ್ದಿನ್ ಖಾಲಿದ್, ಅರವಳಿಕೆ ತಜ್ಞರಾದ ಡಾ.ಕೋನಿಕಾ ನಾಗರಾಜ ಕಾಟ್ವಾ, ಮುಖ್ಯ ವೈದ್ಯಾಧಿಕಾರಿಗಳಾದ ಡಾ.ನಾಗರಾಜ್ ಕಾಟವಾ, ಸಿಬ್ಬಂದಿ ಅನ್ನಪೂರ್ಣ, ತಿಮ್ಮೇಶ್, ಶಿವನಮ್ಮ, ರಾಜಾವಲಿ, ಅಡವಿಕಾಂತ್, ಅನಿಲ್ ಕುಮಾರ್, ರಾಜೇಶ್ ಸೇರಿದಂತೆ ಇನ್ನಿತರರು ಸಹಕಾರ ನೀಡಿದರು.

ಡಿ.ಸಿ ಹಾಗೂ ಸಿಇಓ ಅಭಿನಂದನೆ:



ಮೊಣಕಾಲು ಕೀಲು ಮರು ಮರುಜೋಡಣೆ ಶಸ್ತ್ರಚಿಕಿತ್ಸೆಯನ್ನು ನಡೆಸಿದ ಕರ್ನಾಟಕದ ಮೊದಲ ತಾಲೂಕು ಸರ್ಕಾರಿ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಸಿಂಧನೂರು ಸರ್ಕಾರಿ ಆಸ್ಪತ್ರೆ ಪಾತ್ರವಾದ ಕಾರಣ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ, ಶುಶ್ರೂಷಕ ಅಧಿಕಾರಿಗಳಿಗೂ ಹಾಗೂ ಸಿಬ್ಬಂದಿಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಹಾಗೂ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ನಂದಿತಾ ಅವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಆಯುಷ್ಮಾನ್ ಕಾರ್ಡನಡಿ ಚಿಕಿತ್ಸೆ: ಮಹಿಳೆಯರನ್ನೇ ಹೆಚ್ಚಾಗಿ ಕಾಡುವ ಈ ಮೊಣಕಾಲು ಕೀಲು ನೋವಿನ ಶಸ್ತ್ರ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಮಾಡಲಾಗುತ್ತದೆ. ಖಾಸಗಿ ಆಸ್ಪತ್ರೆಯಲ್ಲಿ ಸುಮಾರು 5 ಲಕ್ಷ ರೂಪಾಯಿ ವೆಚ್ಚವಾಗಲಿದೆ. ಗೋರೆಬಾಳ ಗ್ರಾಮದ ಗಂಗಮ್ಮನಿಗೆ ಆಯುಷ್ಮಾನ್ ಕಾರ್ಡ್ನಡಿ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಕಾರ್ಡ್ ಹೊಂದಿದವರಿಗೆ 5 ಲಕ್ಷ ರೂ.ಗಳ ಸಹಾಯಧನವನ್ನು ಸರಕಾರವೇ ಭರಿಸಲಿದೆ. ಮೊಣಕಾಲು ನೋವಿನಿಂದ ಬಳಲುತ್ತಿರುವವರು ಈ ಶಸ್ತ್ರಚಿಕಿತ್ಸೆಗೆ ಒಳಗಾಗಿ ಗುಣಮುಖರಾಗಬೇಕು ಎಂದು ಇದೆ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಸಲಹೆ ಮಾಡಿದ್ದಾರೆ.

ತಪ್ಪು ಕಲ್ಪನೆ ಬೇಡ: ತಿಂಗಳಿಗೆ ಹಲವಾರು ಜನ ಮೊಣಕಾಲು ಕೀಲು ನೋವಿನಿಂದ ಬಳಲುತ್ತಿರುವ ರೋಗಿಗಳು ಆಸ್ಪತ್ರೆಗೆ ಆಗಮಿಸುತ್ತಾರೆ. ಕೀಲು ನೋವು ಶಸ್ತ್ರ ಚಿಕಿತ್ಸೆ ಬಗ್ಗೆ ರೋಗಿಗಳಲ್ಲಿ ಇರುವ ತಪ್ಪು ಭಾವನೆಯಿಂದ ಚಿಕಿತ್ಸೆ ಪಡೆಯಲು ಭಯಪಡುತ್ತಾರೆ. ಮೊಣಕಾಲು ಕೀಲು ಬದಲಾವಣೆ ಶಸ್ತ್ರಚಿಕಿತ್ಸೆಯಿಂದ ರೋಗಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ. ಶಸ್ತ್ರ ಚಿಕಿತ್ಸೆಗೆ ಒಳಗಾಗಿ 7-8 ದಿನದಲ್ಲಿ ಮೊದಲಿನಂತೆ ಯಾವುದೇ ನೋವಿಲ್ಲದೆ ತಿರುಗಾಡಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ತಿಳಿಸಿದ್ದಾರೆ.

